International Journal of Kannada Research 2015; 1(1): 33-40

International Journal of Kannada Research
www.kannadajournal.com

**ISSN: 2454–5813**
IJSR 2015; 1(1): 33-40
© 2015 IJKS
www.kannadajournal.com
Received: 26-06-2015
Accepted: 30-07-2015

**ಕೆ.ಶಾರದಾ**
ಪ್ರಾಧ್ಯಾಪಕರು, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಆಂಧ್ರ ಪ್ರದೇಶ, ಭಾರತ

**Correspondence**
**ಕೆ.ಶಾರದಾ**
ಪ್ರಾಧ್ಯಾಪಕರು, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಆಂಧ್ರ ಪ್ರದೇಶ, ಭಾರತ

# ರತ್ನಾಕರವರ್ಣಿಯ ಭರತೇಶ ವೈಭವ–ಕೃತಿ ವೈಶಿಷ್ಟ್ಯ

**ಕೆ.ಶಾರದಾ**

**DOI**: https://doi.org/10.22271/24545813.2015.v1.i1a.877

**ಅಮೂರ್ತ**

ಮಧ್ಯಕಾಲೀನ ಕನ್ನಡ ಸಾಹಿತ್ಯದ ಮಹತ್ವದ ಕವಿ ರತ್ನಾಕರವರ್ಣಿ. ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯುಳ್ಳ ರತ್ನಾಕರವರ್ಣಿ ವಸ್ತುವಿನ ಆಯ್ಕೆಯಿಂದ ಹಿಡಿದು ನಿರ್ವಹಣೆ ಹಾಗೂ ನಿರೂಪಣೆಯಲ್ಲಿ ಹೊಸತನವನ್ನು ಅಳವಡಿಸಿಕೊಂಡವನು. ಇವನ ಮೇರು ಕೃತಿಯೆಂದರೆ 'ಭರತೇಶ ವೈಭವ'. ಸಾಂಗತ್ಯದಲ್ಲಿ ಬರೆಯಲ್ಪಟ್ಟ ಈ ಕೃತಿಯು ಕನ್ನಡ ಸಾಹಿತ್ಯದಲ್ಲಿ ಹೊಸ ಶಕೆಯೊಂದರ ಆವಿರ್ಭಾವಕ್ಕೆ ಕಾರಣವಾಯಿತು. ಅಧ್ಯಾತ್ಮ ಸಾಧನೆಗೆ ಅತ್ಯಂತ ಕಠಿಣ ನಿಯಮಗಳನ್ನು ಬೋಧಿಸುವ ಜೈನ ಧರ್ಮದಲ್ಲಿದ್ದುಕೊಂಡು ದೀಕ್ಷೆವಹಿಸಿ ಸಂಪೂರ್ಣ ಧಾರ್ಮಿಕ ಆವರಣದಲ್ಲಿದ್ದ ರತ್ನಾಕರ ಧಾರ್ಮಿಕ ನಿರ್ದೇಶನದಂತೆ ಮಾತನಾಡಬೇಕಾದದ್ದು ಯೋಗ, ತ್ಯಾಗ, ಆಧ್ಯಾತ್ಮಗಳನ್ನು ಕುರಿತೇ ಹೊರತು ಭೋಗವನ್ನು ಕುರಿತಲ್ಲ. ಒಂದು ವೇಳೆ ಆ ಮಾತುಗಳನ್ನಾಡಿದರೂ ಅದು ನಕಾರಾತ್ಮಕ ನೆಲೆಯಲ್ಲಿಯೇ ಕಾಣಿಸಿಕೊಳ್ಳಬೇಕು. ಆದರೆ ರತ್ನಾಕರ ಆ ವಲಯಗಳನ್ನು ಮೀರಿ ಯೋಗದ ಜೊತೆಗೆ ಭೋಗದ ಸಿದ್ಧಿ ಕೊಡುವ ಅನುಪಮ ಆಧ್ಯಾತ್ಮಿಕ ಆನಂದವನ್ನು ಭರತೇಶನ ಮೂಲಕ ತೋರಿಸಿಕೊಡುತ್ತಾನೆ. ಅವನ 'ಹಂಸಕಲೆ', 'ಭೇದವಿಜ್ಞಾನ'ಗಳು ಯೋಗ–ಭೋಗದ ಸಂಕಲನ ವಿಕಲನಗಳನ್ನೇ ಪ್ರತಿಪಾದಿಸುತ್ತವೆ. ಹಾಗಾಗಿ ಜೈನ ಆವರಣದಲ್ಲಿ ರತ್ನಾಕರನೂ, ರತ್ನಾಕರನು ಬರೆದ ಭರತೇಶ ವೈಭವವೂ ಪ್ರಯೋಗಾತ್ಮಕ ನೆಲೆಯಲ್ಲಿ ಬಹುಮುಖ್ಯವಾಗುತ್ತವೆ. ಮತ್ತು ಸಾಹಿತ್ಯ ಚರಿತ್ರೆಯಲ್ಲಿ ರತ್ನಾಕರನ ಸ್ಥಾನವನ್ನು ನಿಗದಿಪಡಿಸುತ್ತವೆ. ಈ ನೇಪತ್ಯದಲ್ಲಿಯೇ ರತ್ನಾಕರನ 'ಭರತೇಶ ವೈಭವ' ಕೃತಿಯ ವೈಶಿಷ್ಟ್ಯವನ್ನು ಇಲ್ಲಿ ಗುರುತಿಸಲಾಗಿದೆ.

**ಕೀವರ್ಡ್‌ಗಳು:** ಯೋಗ, ಭೋಗ, ಆಧ್ಯಾತ್ಮ, ಆನಂದ, ತಾತ್ತ್ವಿಕತೆ, ಚಾತುರ್ವರ್ಣ್ಯ, ಅಹಿಂಸೆ, ತ್ಯಾಗ, ವೈರಾಗ್ಯ.

## ಪೀಠಿಕೆ

ಮಧ್ಯಕಾಲೀನ ಸಾಹಿತ್ಯ ಸಂದರ್ಭ ದೇಶೀ ಪರಿಕಲ್ಪನೆಗಳನ್ನು ಸಾಹಿತ್ಯದಲ್ಲಿ ಸಾಧಿತವಾಗಿಸಿಕೊಳ್ಳುತ್ತಾ ಹೊಸದಿಕ್ಕಿಗೆ ಚಾಲನೆಯನ್ನು ನೀಡಿದ ಸಂದರ್ಭ. ಇದುವರೆಗೆ ಕನ್ನಡ ಸಾಹಿತ್ಯವನ್ನು ನಿರ್ದೇಶಿಸುತ್ತಾ ಬಂದ ಧರ್ಮ–ರಾಜಾಶ್ರಯದ ಯಜಮಾನಿಕೆಗಳ ಕೃಪಾಪೋಷಣೆ ಮತ್ತು ಭಾವನಾತ್ಮಕ ಹೇರಿಕೆಗಳಿಂದ, ಹೊರೆಗಳಿಂದ ದೂರ ಸರಿದು ಹೊಸ ಚಹರೆಗಳನ್ನು ತೊಟ್ಟ ಸಂದರ್ಭ. ಅಭಿವ್ಯಕ್ತಿಗಾಗಿ ಹೊಸ ತುಡಿತಗಳೊಂದಿಗೆ ದೇಸೀಯತೆಯ ಕಡೆಗೆ ಹೊರಳಿದ ಸಾಹಿತ್ಯದಲ್ಲಿ ಪೌರಾಣಿಕ, ಐತಿಹಾಸಿಕ ಪುರುಷರೆಲ್ಲರೂ ದೇಸೀ ಪರಿವೇಷಗಳನ್ನು ತೊಟ್ಟು ನಿಂತ ಕಾಲಘಟ್ಟದಲ್ಲಿ ತನ್ನನ್ನು ಮತ್ತು ತನ್ನ ಸೃಜನಾತ್ಮಕ ಚೇತನವನ್ನು ಪ್ರಯೋಗಕ್ಕೆ ಒಡ್ಡಿಕೊಂಡವನು ರತ್ನಾಕರ. ರತ್ನಾಕರನ ಜೀವನ ಎಷ್ಟು ಕುತೂಹಲಭರಿತವೋ ಆತನ ಭರತೇಶ ವೈಭವವೂ ಅಷ್ಟೇ ಕುತೂಹಲಭರಿತವಾದುದು.

ಅಧ್ಯಾತ್ಮ ಸಾಧನೆಗೆ ಅತ್ಯಂತ ಕಠಿಣ ನಿಯಮಗಳನ್ನು ಬೋಧಿಸುವ ಜೈನ ಧರ್ಮದಲ್ಲಿದ್ದುಕೊಂಡು ದೀಕ್ಷೆವಹಿಸಿ ಸಂಪೂರ್ಣ ಧಾರ್ಮಿಕ ಆವರಣದಲ್ಲಿದ್ದ ರತ್ನಾಕರ ಧಾರ್ಮಿಕ ನಿರ್ದೇಶನದಂತೆ ಮಾತನಾಡಬೇಕಾದದ್ದು ಯೋಗ, ತ್ಯಾಗ, ಆಧ್ಯಾತ್ಮಗಳನ್ನು ಕುರಿತೇ ಹೊರತು ಭೋಗವನ್ನು ಕುರಿತಲ್ಲ. ಒಂದು ವೇಳೆ ಆ ಮಾತುಗಳನ್ನಾಡಿದರೂ ಅದು ನಕಾರಾತ್ಮಕ ನೆಲೆಯಲ್ಲಿಯೇ ಕಾಣಿಸಿಕೊಳ್ಳಬೇಕು. ಆದರೆ ರತ್ನಾಕರ ಆ ವಲಯಗಳನ್ನು ಮೀರಿ ಯೋಗದ ಜೊತೆಗೆ ಭೋಗದ ಸಿದ್ಧಿ ಕೊಡುವ ಅನುಪಮ ಆಧ್ಯಾತ್ಮಿಕ ಆನಂದವನ್ನು ಭರತೇಶನ ಮೂಲಕ ತೋರಿಸಿಕೊಡುತ್ತಾನೆ. ಅವನ 'ಹಂಸಕಲೆ', 'ಭೇದವಿಜ್ಞಾನ'ಗಳು ಯೋಗ–ಭೋಗದ ಸಂಕಲನ ವಿಕಲನಗಳನ್ನೇ ಪ್ರತಿಪಾದಿಸುತ್ತವೆ. ಹಾಗಾಗಿ ಜೈನ ಆವರಣದಲ್ಲಿ ರತ್ನಾಕರನೂ, ರತ್ನಾಕರನು ಬರೆದ ಭರತೇಶ ವೈಭವವೂ ಪ್ರಯೋಗಾತ್ಮಕ ನೆಲೆಯಲ್ಲಿ

ಬಹುಮುಖ್ಯವಾಗುತ್ತವೆ. ಮತ್ತು ಸಾಹಿತ್ಯ ಚರಿತ್ರೆಯಲ್ಲಿ ರತ್ನಾಕರನ ಸ್ಥಾನವನ್ನು ನಿಗದಿಪಡಿಸುತ್ತವೆ. ಬಹುಶಃ ವ್ಯಕ್ತಿಗತ ನೆಲೆಯಲ್ಲಿ ಜೀವಂತವಿದ್ದಾಗಲೇ ರೋಚಕವಾಗಿ ಬದುಕಿ ತನ್ನ ಸಮುದಾಯದಲ್ಲಿ ಅನೇಕ ವಾದವಿವಾದಗಳಿಗೆ ಆಗರವಾದ ರತ್ನಾಕರನ ಮನೋಧರ್ಮ ವಿಲಕ್ಷಣವಾದುದು. ಬಹುಶಃ ಜೈನಕವಿಗಳಲ್ಲಿ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿ ಇಷ್ಟೊಂದು ವಾದವಿವಾದಗಳಿಗೆ ಒಳಗಾದ ಮತ್ತೊಬ್ಬ ಕವಿ ನಮಗೆ ಕಾಣದೊರೆಯುವುದಿಲ್ಲ. ಅವನ ಸುತ್ತ ಹೆಣೆದುಕೊಂಡು ದಂತಕಥೆಗಳು, ದೇವಚಂದ್ರ ಕೊಡುವ ವಿವರಗಳು, ಆತನ ಮತಾಂತರ, ರತ್ನಾಕರ ಮತ್ತು ಅವರ ಕೃತಿ ಜೈನಮತದಿಂದ ಮತ್ತು ಆಚಾರ್ಯರಿಂದ ತಿರಸ್ಕಾರಕ್ಕೊಳಗಾದದ್ದು.... ಬಹಿಷ್ಕಾರ.... ಈ ಎಲ್ಲವೂ ಒಂದು ನಿಟ್ಟಿನಲ್ಲಿ ಅವನ 'ಭರತೇಶ ವೈಭವ'ದ ಕೃತಿಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾದರೆ ಭೈರರಸ ಒಡೆಯನ ಪುತ್ರಿಯೊಂದಿಗಿನ ಸಂಬಂಧ, ಚಾರುಕೀರ್ತಿಗಳು, ಮಹೇಂದ್ರ ಕೀರ್ತಿಗಳು, ಹಂಸನಾಥ (?), ಮತಾಂತರ.....ವೀರಶೈವ ಸಮುದಾಯಗಳೊಂದಿಗಿನ ಒಡನಾಟ, ಅದರ ತಾತ್ತ್ವಿಕ ನೇಪಥ್ಯಗಳು... ರತ್ನಾಕರನನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತವೆ. ವೈಯಕ್ತಿಕ ಕಾರಣಗಳಿಗಾಗಿ ರಾಜಾಶ್ರಯವನ್ನು, ಧಾರ್ಮಿಕ ಸೈದ್ಧಾಂತಿಕ ಭಿನ್ನತೆಗಳ ಕಾರಣಗಳಿಂದಾಗಿ ಮಠಮಾನ್ಯಗಳ ಆಶ್ರಯವನ್ನು ಕಳೆದುಕೊಂಡ ರತ್ನಾಕರನ ಬಗ್ಗೆ ಹುಟ್ಟಿಕೊಂಡ ದಂತಕಥೆಗಳು ಆತನ ವಿಲಕ್ಷಣ ಪ್ರವೃತ್ತಿಯನ್ನು ಪಾರಂಪರಿಕ ಮೌಢ್ಯಗಳಿಂದ ದೂರ ಸರಿಸುವ ಅವನ ಬದುಕಿನ ವೈರುಧ್ಯಗಳನ್ನು ಅವನ ಕ್ರಾಂತಿಕಾರಕ, ಜೀವಪರ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ.

ಇನ್ನು 'ಭರತೇಶ ವೈಭವ' ಕೃತಿಯ ವೈಶಿಷ್ಟ್ಯವನ್ನರಿಯಲು ಇನ್ನೂ ಕೆಲವು ಪೂರಕ ಮಾಹಿತಿಗಳನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಭರತೇಶ ವೈಭವದ ವಸ್ತುವಿನ ನೆಲೆಯಲ್ಲಿ ನಿಂತು ನೋಡಿದಾಗ ಬಹುಶಃ ರನ್ನನ 'ಚಕ್ರೇಶ್ವರ ಚರಿತೆ' (ಅನುಪಲಬ್ಧ) ಯನ್ನು ಹೊರತು ಪಡಿಸಿದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಭರತನನ್ನು ಕಥಾನಾಯಕನನ್ನಾಗಿ ಚಿತ್ರಿಸಿದ ಕಾವ್ಯಗಳು ರತ್ನಾಕರನ ಪೂರ್ವ–ಉತ್ತರಕಾಲೀನ ಸಾಹಿತ್ಯದಲ್ಲಿ ದೊರೆಯುವುದೇ ಇಲ್ಲ. ಇದೊಂದು ಅಂಶವಾದರೆ ಜೈನ ಕವಿಗಳು ಪ್ರತಿನಾಯಕನನ್ನಾಗಿ ಚಿತ್ರಿಸಿದ, ಸಮುದಾಯವೂ ಪ್ರತಿನಾಯಕನಂತೆಯೇ ಗಣಿಸುತ್ತಾ ಬಂದ ಭರತನಂಥವನನ್ನು ರತ್ನಾಕರ ತನ್ನ ಕಾವ್ಯಕ್ಕೆ ಕಥಾನಾಯಕನನ್ನಾಗಿ ಮಾಡಿಕೊಂಡದ್ದು.

ಇದರ ನೆಲೆಗಳನ್ನು ಪ್ರಾಕೃತ–ಸಂಸ್ಕೃತ–ಕನ್ನಡ ಕಾವ್ಯಗಳಲ್ಲಿ ನೋಡಿದಾಗಲೂ ಸಾಂಪ್ರಾದಾಯಿಕ ಪಡಿಯಚ್ಚುಗಳೇ ಕಂಡು ಬರುತ್ತವೆ. ಪ್ರಾಕೃತದಲ್ಲಿ ಭರತನ ಚರಿತ್ರೆಯನ್ನೊಳಗೊಂಡ ಕಥೆ ನಮಗೆ ಮೊಟ್ಟ ಮೊದಲ ಬಾರಿಗೆ ದೊರೆಯುವುದು ಕ್ರಿ.ಶ.1ನೆಯ ಶತಮಾನದ ವಿಮಲಸೂರಿಯ 'ಪಉಮಚರಿಯ' ಅಥವಾ 'ಪದ್ಮ ಚರಿತ್ರೆ'ಯಲ್ಲಿ ಎಪ್ಪತ್ತು ಗಾಥೆಗಳಲ್ಲಿ ಭರತ ಬಾಹುಬಲಿಯರ ಚರಿತ್ರೆ ಇಲ್ಲಿ ವಿಸ್ತರಿಸಿಕೊಂಡಿದೆ. ಮುಂದೆ ಸಂಸ್ಕೃತದಲ್ಲಿ ರವಿಷೇಣನ (ಕ್ರಿ.ಶ. 676) 'ಪದ್ಮಪುರಾಣ', ಪುನ್ನಾಟ ಸಂಘದ ಜಿನಸೇನಾಚಾರ್ಯರ (ಕ್ರಿ.ಶ.870), 'ಚಪ್ಪನ್ನ ಮಹಾಪುರಿಸ ಚರಿಯಂ' (ಪ್ರಾಕೃತ) ಮುಂತಾದವು ಪೂರ್ವ ಪುರಾಣಕ್ಕೂ ಪೂರ್ವದಲ್ಲಿ ಭರತನ ಚರಿತೆಯನ್ನು ಒಳಗೊಂಡ ಕಾವ್ಯಗಳು. ಜಿನಸೇನಾಚಾರ್ಯರ 'ಪೂರ್ವಪುರಾಣ', ಅಪಭ್ರಂಶದಲ್ಲಿ ಬರೆದ ಪುಷ್ಪದಂತನ (ಕಿ.ಶ.965) 'ಪುಷ್ಪದಂತಪುರಾಣ', ಕುಮಾರಪಾಲ ಆಶ್ರಿತ ಹೇಮಚಂದ್ರಾಚಾರ್ಯನ (ಕ್ರಿ.ಶ.12ನೇ ಶತಮಾನ) 'ತ್ರಿಷಷ್ಠಿ ಶಲಾಕ ಪುರುಷ ಚರಿತೆ'– ಮುಂತಾದವು ಪೂರ್ವ ಪುರಾಣದ ನಂತರ ಬಂದ ಕನ್ನಡೇತರ ಕಾವ್ಯಗಳು. ಜಿನಸೇನಾಚಾರ್ಯರಿಗೂ ಪೂರ್ವದಲ್ಲಿ 'ತ್ರಿಷಷ್ಠಿ ಶಲಾಕ ಪುರುಷ ಪುರಾಣವನ್ನು ಕವಿಪರಮೇಷ್ಠಿ' (ಕ್ರಿ.ಶ.550) ಬರೆದುದಾಗಿ ಚಾವುಂಡರಾಯ ಪುರಾಣದಲ್ಲಿ ಹೇಳಿದ್ದಾನೆ.

ಭರತ ಬಾಹುಬಲಿಯರ ಚರಿತೆಯನ್ನು ಕನ್ನಡಕ್ಕೆ ತಂದವನು ಪಂಪ. ಈತ ಜಿನಸೇನಾಚಾರ್ಯರ ಪೂರ್ವಪುರಾಣದ ಸಿದ್ಧಮಾದರಿಯನ್ನೇ ಅನುಸರಿಸಿದ್ದಾನೆ. ಪಂಪನ ನಂತರ ಚಾವುಂಡರಾಯನ (ಕಿ.ಶ.978) 'ತ್ರಿಷಷ್ಠಿ ಶಲಾಕ ಪುರುಷ ಪುರಾಣ', ಹಸ್ತಿಮಲ್ಲನ (ಕಿ.ಶ.1290) 'ಪೂರ್ವಪುರಾಣ' (ಗದ್ಯಶೈಲಿ) ಮುಂತಾದ ಕಾವ್ಯಗಳೆಲ್ಲವೂ ರತ್ನಾಕರನ ಪೂರ್ವಕಾಲೀನ ಕಾವ್ಯಗಳು ಮತ್ತು ಹೆಚ್ಚಿನ ಮಟ್ಟಿಗೆ ಪೂರ್ವಪುರಾಣವನ್ನು ಮತ್ತು ಪಂಪನ ಮಾರ್ಗವನ್ನು ಅನುಸರಿಸಿಕೊಂಡೇ ಬಂದವು. ರತ್ನಾಕರನ ಉತ್ತರಕಾಲೀನದಲ್ಲಿ ಹುಟ್ಟಿಕೊಂಡ ಚಿಕ್ಕಣ್ಣ ಪಂಡಿತನ 'ಬಾಹುಬಲಿ ಚರಿತೆ'(ಕಿ.ಶ. 15ನೇ ಶತಮಾನ), ಪಂಚಬಾಣನ (ಕಿ.ಶ.1614), 'ಭುಜಬಲಿ ಚರಿತೆ', ಚದುರ ಚಂದ್ರಮನ (ಕಿ.ಶ.1646), 'ಮದನಾರಿ ಗುಮ್ಮಟ ಸ್ವಾಮಿಯ ಚರಿತೆ', ಅನಂತ ಕವಿಯ (ಕಿ.ಶ.1780) 'ಗೋಮ್ಮಟೇಶ್ವರ ಚರಿತೆ' ಮುಂತಾದ ಕಾವ್ಯಗಳು ರತ್ನಾಕರನ ಪೂರ್ವಕಾಲೀನ ಸಿದ್ಧ ಮಾದರಿಗಳನ್ನೇ ಇಟ್ಟುಕೊಂಡಾಗಲೂ ಈ ಕಾವ್ಯಗಳ ಶೀರ್ಷಿಕೆಗಳೇ ಹೇಳುವಂತೆ ಈ ಕಾವ್ಯಗಳ ಕಥಾನಾಯಕ ಬಾಹುಬಲಿ. ಮುಂದೆ ಆಧುನಿಕ ಕನ್ನಡ ಕವಿಗಳ ಮನಸ್ಸನ್ನು ಬಾಹುಬಲಿ ಸೂರೆಗೊಂಡಷ್ಟು ಭರತ ಸೂರೆಗೊಂಡಿಲ್ಲ. ಜಾನಪದ ಸಾಹಿತ್ಯದಲ್ಲಿಯೂ ಬಾಹುಬಲಿಯನ್ನು ಪೂಜ್ಯಭಾವದಿಂದ ಕಂಡು ಮತ್ತೆ ಮತ್ತೆ ಪ್ರಸ್ತಾಪಿಸಲಾಗುತ್ತದೆಯೇ ಹೊರತು ಭರತನ ಕುರಿತಲ್ಲ. ಷಟ್ಖಂಡಗಳೊಡೆಯ ಭರತನಿಂದಲೇ (?) ಈ ದೇಶಕ್ಕೆ 'ಭರತವರ್ಷ' ಎಂದು ಹೆಸರು ಬಂದುದಾಗಿ ಭಾಗವತದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆದರೂ ಜೈನ ತಾತ್ತ್ವಿಕ ಪರಿಧಿಯಿಂದ ದೂರವುಳಿದ ಭರತನು ಬಾಹುಬಲಿಯಷ್ಟು ಆತ್ಮೀಯನಾಗದೆ ಜೈನ ಸಮುದಾಯದ ಆಂತರಂಗಿಕ ಪರಿಧಿಯಿಂದ ದೂರವೇ ಉಳಿದ.

ಪ್ರಾಕೃತ–ಸಂಸ್ಕೃತ–ಕನ್ನಡ ಸಾಹಿತ್ಯವು ಒಂದು ಸಿದ್ಧ ತಾತ್ತ್ವಿಕ ವಲಯದಲ್ಲಿಯೇ ಭರತ–ಬಾಹುಬಲಿಯರ ಪಾತ್ರಗಳನ್ನು ರೂಪಿಸಿದರೆ ಕರ್ನಾಟಕದ ಜೈನ ವಾಸ್ತುಶಿಲ್ಪದ ಮೇಲೂ ಇದರ ಪರಿಣಾಮಗಳನ್ನು ಕಾಣಬಹುದು. ಭಾರತದಲ್ಲಿ ಇದುವರೆಗೆ ಗಮನಿಸಿದ ಬಾಹುಬಲಿಯ ಶಿಲ್ಪಗಳಲ್ಲಿ ಅತಿ ಪ್ರಾಚೀನ ಶಿಲ್ಪವೆಂದರೆ ಕರ್ನಾಟಕದ ಬದಾಮಿಯ ಗುಹೆಯಲ್ಲಿರುವ ಕಾಯೋತ್ಸರ್ಗ ಬಾಹುಬಲಿ ಮೂರ್ತಿ. ಇದು ಕ್ರಿ.ಶ.7ನೆಯ ಶತಮಾನಕ್ಕೆ ಸೇರಿದ್ದು. ನಂತರ ಒಂದು ಕಾಲಕ್ಕೆ ಕರ್ನಾಟಕದ ಒಂದು ಭಾಗವೇ ಆಗಿದ್ದ ಎಲ್ಲೋರಾ ಗುಹೆಗಳಲ್ಲಿನ ಬಾಹುಬಲಿಯ (ಕಿ.ಶ.10ನೇ ಶತಮಾನ) ಹನ್ನೆರಡು ಶಿಲ್ಪಗಳು. ನಂತರ ಸೃಷ್ಟಿಯಾದದ್ದು ಶ್ರವಣಬೆಳಗೊಳದ (ಕಿ.ಶ.981) ಗೋಮ್ಮಟೇಶ್ವರ. ನಂತರ ಬಹುಶಃ ರತ್ನಾಕರನ ಉತ್ತರಾರ್ಧದಲ್ಲಿ ಕಾರ್ಕಳ ಗೋಮ್ಮಟೇಶ್ವರ (ಕಿ.ಶ.1432), ನಂತರ ವೇಣೂರಿನ (ಕಿ.ಶ.1604) ಗೊಮ್ಮಟ ಶಿಲ್ಪಗಳು ಪ್ರತಿಷ್ಠಾಪಿಸಲ್ಪಟ್ಟವು. ದಿಗಂಬರ ಸಂಪ್ರದಾಯದವರ ಆರಾಧ್ಯನಾದ ಬಾಹುಬಲಿಗಾಗಿ ಕ್ರಿ.ಶ.898ರಲ್ಲಿಯೇ ವಿಕ್ರಮ ಸಾಂತರನು ಬಾಹುಬಲಿ ಜಿನಾಲಯವನ್ನು ನಿರ್ಮಿಸಿದನು. ಈ ಜಿನಾಲಯದಲ್ಲಿರುವ ಮೂರ್ತಿಯೇ ಬಾಹುಬಲಿಯ ಪ್ರಥಮ ಪೂರ್ಣಾಕಾರದ ಮೂರ್ತಿ. ಪ್ರಭಾವಳಿಯೂ, ಮುಕ್ಕೊಡೆಯೂ ಇವೆ. ಹಿಂದಿನ ಬಾದಾಮಿ, ಐಹೊಳೆ, ಎಲ್ಲೋರಾಗಳಲ್ಲಿರುವ ಮೂರ್ತಿಗಳೆಲ್ಲ ಉಬ್ಬುಶಿಲ್ಪಗಳು. ಪೂಜಾಮೂರ್ತಿಗಳಲ್ಲ. ಕೇವಲ ಅಲಂಕಾರ ಶಿಲ್ಪಗಳು, ಈ ಬಸದಿಯು ಹುಂಚದ ಬಳಿಯ ಬೆಟ್ಟವೊಂದರ ಮೇಲಿದೆ.

ಹೀಗೆ ರತ್ನಾಕರನ ಕಾಲಕ್ಕಾಗಲೇ ಬಾಹುಬಲಿಯ ಆರಾಧನೆ ಕರ್ನಾಟಕದಾದ್ಯಂತ ನೆಲೆಗೊಂಡು ಜೈನ ಸಮುದಾಯದ ಒಂದು ಸಾಂಸ್ಕೃತಿಕ ಅವಿಭಾಜ್ಯ ಅಂಗವೇ ಆದಂತಹ ಸಂದರ್ಭದಲ್ಲಿ... ರತ್ನಾಕರನು ಭರತೇಶನ ಮೇಲೆ ಒಂದು ಮಹಾಕಾವ್ಯವನ್ನು

ಬರೆಯಲು ಹೊರಟದ್ದು ನಿಜಕ್ಕೂ ಸೋಜಿಗವನ್ನುಂಟು ಮಾಡುವಂಥದ್ದು. ಇಲ್ಲಿ ಇನ್ನೂ ಒಂದು ಮಾತನ್ನು ಪ್ರಸ್ತಾಪಿಸಬೇಕಿದೆ. ಈ ಲೇಖನವನ್ನು ಸಿದ್ಧಪಡಿಸುವಾಗ ಭರತನ ಮೂರ್ತಿಗಳು ಎಲ್ಲಿಯಾದರೂ ದೊರೆಯಬಹುದೇನೋ ಎಂದು ಸಮೀಕ್ಷಿಸಿದ್ದಾಯಿತು. ಆದರೆ ಚಿಕ್ಕ ಬೆಟ್ಟದಲ್ಲಿರುವ ಒಂದು ಮೂರ್ತಿಯನ್ನು ಬಿಟ್ಟರೆ ಮತ್ತೆಲ್ಲಿಯೂ ಭರತನ ಮೂರ್ತಿಗಳು ಇದ್ದ ಸೂಚನೆಗಳು ದೊರೆಯಲಿಲ್ಲ.[೨] ಚಿಕ್ಕಬೆಟ್ಟದ ಕೋಟೆಯ ಒಂದು ಬದಿಯಲ್ಲಿ ಒಂಬತ್ತು ಅಡಿ ಎತ್ತರದ ವಿಗ್ರಹವಿದ್ದು ಆ ನಗ್ನಮೂರ್ತಿ ಮೊಳಕಾಲಿನವರೆಗೂ ಭೂಮಿಯಲ್ಲಿ ಹೂತಂತಿದೆ. (ಎಂದರೆ ಅಪೂರ್ಣ ಶಿಲ್ಪ). ಈ ಅಪೂರ್ಣ ಶಿಲಾಮೂರ್ತಿಯ ಕುರಿತು ಐತಿಹ್ಯವೊಂದು ಪ್ರಚಲಿತದಲ್ಲಿದೆ.

ಈ ಮೂರ್ತಿ ಭರತನದಾಗಿದ್ದು ಬಾಹುಬಲಿಯೊಂದಿಗೆ ಅಧರ್ಮದ ಯುದ್ಧ ನಡೆಸಿದ ಭರತ ದೊಡ್ಡ ಬೆಟ್ಟದ ಮೇಲಿರುವ ಬಾಹುಬಲಿಯ ಎದುರಿಗೆ ಕುಬ್ಜನಂತೆ ಚಿಕ್ಕಬೆಟ್ಟದ ಮೇಲೆ ನಿಂತಿದ್ದಾನಂತೆ. ಬಾಹುಬಲಿಯ ಔನ್ನತ್ಯಕ್ಕೆ ನಾಚಿ ಭೂಮಿಗಿಳಿದು ಹೋಗುತ್ತಿದ್ದಾನಂತೆ. ಪ್ರತಿ ಮಸ್ತಕಾಭಿಷೇಕವಾದಾಗಲೂ ಭರತೇಶ ಒಂದು ಭತ್ತದ ಕಾಳಿನಷ್ಟು ಒಳಗೆ ಇಳಿಯುತ್ತಾನೆ. ಈ ಕಲಿಗಾಲ ಮುಗಿಯುವಷ್ಟರಲ್ಲಿ ಭರತ ಸಂಪೂರ್ಣವಾಗಿ ಪಾತಾಳಕ್ಕೆ ಇಳಿದು ಬಿಡುತ್ತಾನೆ ಎಂಬುದಾಗಿ ಜಾನಪದರಲ್ಲಿ ಪ್ರತೀತಿ.[೩] ಈ ಐತಿಹ್ಯ ಭರತನನ್ನು ಜೈನಸಮುದಾಯ ಪರಿಗಣಿಸುವ ಪರಿಯನ್ನು ಮನದಟ್ಟು ಮಾಡುತ್ತದೆ.

ಇಂತಹ ಐತಿಹ್ಯದ ಧೋರಣೆಯನ್ನೇ ಪ್ರತಿನಿಧಿಸುತ್ತಿದ್ದ ಶಿಷ್ಟ ಜೈನಸಮುದಾಯಕ್ಕೆ ರತ್ನಾಕರನು ಭರತೇಶನ ಮೇಲೆ ಒಂದು ಮಹಾಕಾವ್ಯವನ್ನೇ ಬರೆದು ಕೊಟ್ಟದ್ದು ಈ ಕೃತಿ ವಿಶಿಷ್ಟತೆಗೆ ಒರೆಗಲ್ಲಾಗುತ್ತದೆ. ಅಷ್ಟೇ ಅಲ್ಲದೆ ತಾತ್ತ್ವಿಕ ನೆಲೆಯಲ್ಲಿ ನೋಡಿದಾಗಲೂ ಭರತನ ಆಕ್ರಮಣಕಾರಕ ವ್ಯಕ್ತಿತ್ವ... ರಾಜ್ಯವಿಸ್ತರಣಾಕಾಂಕ್ಷೆ... ಮೊದಲಾದವು ಜೈನ ಮನೋಧರ್ಮದ ಮೂಲ ಪ್ರವೃತ್ತಿಗೆ ವಿರುದ್ಧವಾದವು... ಭರತ ಹಿಂಸೆಯನ್ನು ಪೋಷಿಸಿದ, ಚಾತುರ್ವರ್ಣ್ಯವನ್ನು ಪುನಃ ಸ್ಥಾಪಿಸಿದ, ಭೋಗವನ್ನು ಪುರಸ್ಕರಿಸಿದ ಎಂಬ ಕಾರಣಗಳಿಗಾಗಿ ಸಮುದಾಯದ ಮನ್ನಣೆಗೆ ಈ ಹಿಂದೆ ಪಾತ್ರನಾದುದಿಲ್ಲ. ಇವುಗಳಿಗಿಂತ ಮುಖ್ಯವಾದ ಒಂದು ಮಾತೆಂದರೆ ವೈದಿಕ ವಿರೋಧೀ ಪರಿಕಲ್ಪನೆಯೊಂದಿಗೆ ಆದಿವೃಷಭನ ವಿಚಾರಧಾರೆಯಿಂದ ಸ್ಪಷ್ಟರೂಪುತಳೆದ ಶ್ರಮಣ ಸಂಪ್ರದಾಯವನ್ನು ಅದರ ತಾತ್ತ್ವಿಕ ವಿಚಾರಗಳನ್ನು ಒಂದನೆಯ ತಲೆಮಾರಿನವರಾದ ತನ್ನ ಮಕ್ಕಳೇ ಆದ ಬಾಹುಬಲಿ ಮತ್ತು ಇತರ ತೊಂಬತ್ತೆಂಟು ಮಂದಿ ಸೋದರರು ಸ್ವೀಕರಿಸಿದಂತೆ ಭರತನೂ ಸಂಪೂರ್ಣ ಸ್ವೀಕರಿಸಿದನೇ ಎಂಬ ಪ್ರಶ್ನೆ? (ಚಾತುರ್ವರ್ಣ್ಯವನ್ನು ಪುನಃ ಪ್ರತಿಷ್ಠಾಪಿಸಿದ ಎಂಬ ಮಾತು ಈ ಸಂದೇಹಗಳಿಗೆ ಎಡೆಮಾಡಿಕೊಡುತ್ತದೆ). ಇದಲ್ಲದೆ ಭರತ–ಬಾಹುಬಲಿ–ನೂರುಜನ ತಮ್ಮಂದಿರ ನಡುವಿನ ವೈಷಮ್ಯಗಳಿಗೆ ನೆಲದ ಒಡೆತನವೊಂದೇ ಕಾರಣಾಯಿತೆ ಎಂಬುದು ವಿಚಾರಾರ್ಹ.

ಆದರೆ ಜೈನ ಪರಂಪರೆಯಲ್ಲಿ ಸಾಂಪ್ರಾದಾಯಿಕ ಬಾಹುಬಲಿಯ ವ್ಯಕ್ತಿತ್ವ ಭರತನ ವ್ಯಕ್ತಿತ್ವಕ್ಕಿಂತ ತೀರಾ ಭಿನ್ನವಾಗಿ ಅಹಿಂಸೆ, ತ್ಯಾಗ, ವೈರಾಗ್ಯಗಳ ಸಂಕೇತವಾಗಿ ನಿಲ್ಲುತ್ತದೆ. ಹಾಗಾಗಿ ಜೈನಸಮುದಾಯ ಇಂದಿಗೂ ಬಾಹುಬಲಿಯನ್ನು ಆರಾಧಿಸುತ್ತದೆ. ಇಂತಹ ನೇಪಥ್ಯದಲ್ಲಿ ರತ್ನಾಕರ ಮೆಚ್ಚಿದ್ದು ಮಾತ್ರ ಭರತನನ್ನು. ಜೈನ ತಾತ್ತ್ವಿಕ ವಿಚಾರಗಳಿಗೆ ಬಂದಾಗ ಪ್ರತಿನಾಯಕನಾಗಿ ಕಾಣಿಸಿಕೊಳ್ಳುವ ಭರತ ರತ್ನಾಕರವರ್ಣಿಗೆ ಮಾತ್ರ ಆತ್ಮೀಯನೆನಿಸಿ ಕಥಾನಾಯಕನಾಗುತ್ತಾನೆ.

ಇನ್ನು ಈ ಕೃತಿಯನ್ನು ವಿಶಿಷ್ಟವಾಗಿಸಿದ ಮತ್ತೊಂದು ಅಂಶವೆಂದರೆ ಯೋಗ–ಭೋಗದ ವಿಚಾರ. ಭೋಗ–ವೈರಾಗ್ಯ ವಿರುದ್ಧ ನೆಲೆಯಲ್ಲಿ ನಿಲ್ಲುವಂತಹವು. ಆದರೆ ಭೋಗದ ಉತ್ಕೃಷ್ಟಕ್ಕೆ ಯೋಗತ್ವಕ್ಕೆ ಒಂದು ಗಟ್ಟಿ ತಳಪಾಯವನ್ನು ಒದಗಿಸಬಲ್ಲುದು. ಇದಕ್ಕೆ ಜೈನಪುರಾಣಗಳು, ಕಾವ್ಯಗಳೇ ಉತ್ತಮ ಉದಾಹರಣೆಯಾಗುತ್ತವೆ. ಆದರೆ ಈ ಅಂಶಗಳ ನಿರೂಪಣೆಗೆ ಬಂದಾಗ ಜೈನಪುರಾಣ–ಕಾವ್ಯಗಳು ವೈರಾಗ್ಯವನ್ನು ವೈಭವೀಕರಿಸುತ್ತಾ ಭೋಗವನ್ನು ಕ್ಷಣಿಕವೆಂದು, ಕ್ಷುಲ್ಲಕವೆಂದು (ಜೈನ ನಿಷಿದಿ ಶಾಸನಗಳನ್ನು ನೋಡಿದರೆ ಬಹುಶಃ ಈ ಅಂಶ ಇನ್ನಷ್ಟು ಸ್ಪಷ್ಟವಾಗುತ್ತದೆ) ಭೋದಿಸುವ ಜೈನಭಾವಜಾಲ ಆ ಮೂಲಕ ಮಾನವನ ಅತಿಮುಖ್ಯ ಜೀವತತ್ವವನ್ನೇ ಗೌಣವಾಗಿಸಿದ್ದುಂಟು. ಆದರೆ ರತ್ನಾಕರನ ಜೀವನದ ಪರಿಪೂರ್ಣತೆಗೆ ಭೋಗ–ಯೋಗಗಳೆರಡೂ ಇಹ–ಪರಗಳೆರಡೂ ಅತಿಮುಖ್ಯವೆಂದು ಸೂತ್ರೀಕರಿಸಲು ಹೊರಡುತ್ತಾನೆ. ತನ್ನ ಮುಂದಿರುವ ಜೈನ ಲೌಕಿಕ–ಧಾರ್ಮಿಕ ಪುರಾಣಗಳನ್ನು, ಕಾವ್ಯಗಳನ್ನು ಬದಿಗಿಟ್ಟು, ವೈರಾಗ್ಯವನ್ನು ಕುರಿತೇ ಮಾತನಾಡುವ ಜೈನಧರ್ಮಕ್ಕೆ ರತ್ನಾಕರನ ಈ ಭೋಗ–ಯೋಗ ವಿಚಾರ ಅರಗಿಸಿಕೊಳ್ಳಲು ಸಾಧ್ಯವಿಲ್ಲದ್ದು. ಭೋಗ–ಯೋಗಗಳಿಗೆ ಹೊಸಪರಿಭಾಷೆಯನ್ನು ನೀಡುವ ರತ್ನಾಕರ ಭೋಗದ ಫಲಿತಗಳಿಗೂ–ಯೋಗದ ಫಲಿತಗಳಿಗೂ ಹೊಸನಿರ್ವಚನವನ್ನು ನೀಡುತ್ತಾನೆ. ಆ ಮೂಲಕ ಪರಂಪರೆಯೊಂದಿಗೆ ಸಂಘರ್ಷಕ್ಕಿಳಿಯುತ್ತಾನೆ.

> ಭೋಗ ವಿಚಾರವು ಬೇಕು ನೃಪತಿಗೆ ಆತ್ಮ। ಯೋಗ ವಿಚಾರವು ಬೇಕು॥
> ರಾಗರಸಿಕನಾಗಬೇಕು ಭಾವಿಸಿವೀತ। ರಾಗರಸಿಕನಾಗಬೇಕು॥

ಎಂದು ರತ್ನಾಕರ ಭೋಗ–ಯೋಗಗಳೆರಡೂ ಬದುಕಿಗೆ ಪರಿಪೂರ್ಣತೆಯನ್ನು ತಂದುಕೊಡಬಲ್ಲವೆಂದು ಗಾಢವಾಗಿ ನಂಬುತ್ತಾನೆ. ಹಾಗಾಗಿಯೇ 'ಶಿಲೆಯ ಮೇಲಿಪ್ಪ ಭೋಗಿಗಳುಂಟು ಮೊಲೆಯ ಮೇಲಿಪ್ಪ ಯೋಗಿಗಳುಂಟು' ಎಂಬ ತಾತ್ವಿಕತೆಯೊಂದಿಗೊಡಗೂಡಿದ ವಾಸ್ತವ ನೆಲೆಯ ಘೋಷಣೆ ಕಾವ್ಯದುದ್ದಕ್ಕೂ ಅನುರಣಿಸುತ್ತದೆ. ಆದರೆ ಈ ಮಾತು ಎಷ್ಟೇ ತರ್ಕಸಮ್ಮತವೆನಿಸಿದಾಗಲೂ ಬಹುಶಃ ಮುಂದೆ ರತ್ನಾಕರ ಎದುರಿಸಿದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಜೈನಕವಿ ಪರಂಪರೆಗೆ ರತ್ನಾಕರನ ಕೃತಿ ಎಷ್ಟೇ ವೈವಿಧ್ಯತೆಗೆ ಎಡೆ ಮಾಡಿಕೊಟ್ಟಾಗಲೂ ಮುಂದಿನ ಪೀಳಿಗೆಗೆ ರತ್ನಾಕರನೂ ಮಾದರಿಯಾಗಲಿಲ್ಲ. ರತ್ನಾಕರನ ಭರತೇಶ ವೈಭವವೂ ಮಾದರಿಯಾಗಲಿಲ್ಲ.

ಕೃತಿಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ನಾಯಕನ ಆಂತರಿಕ, ಕೌಟುಂಬಿಕ ಸಂಬಂಧಗಳು ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ ಸಂದರ್ಭದಲ್ಲಿ ಅಪ್ರಸ್ತುತವೆಂದೇ ತಿಳಿದ ಕಾಲದಲ್ಲಿ ನಾಯಕನ ವೈಯಕ್ತಿಕ ಶೃಂಗಾರ–ಭೋಗ ಜೀವನವನ್ನು ಆಪ್ತವಾಗಿ ಕಟ್ಟಿಕೊಡುವ ರತ್ನಾಕರ ಆ ಮೂಲಕ ಕಾವ್ಯವನ್ನು ಕೌತುಕವಾಗಿಸುತ್ತಾನೆ. ಆ ಮೂಲಕ ಕಾವ್ಯ ಘನತೆಯ ಸ್ತರಗಳನ್ನು ಹೆಚ್ಚಿಸುತ್ತಾನೆ. "ಉದಾತ್ತನಾಮಕೋಪೇತ ಗುಣವದ್ ವೃತ್ತರ್ಮುಕ"... ಇದೊಂದು ಮಹಾಕಾವ್ಯದ ಲಕ್ಷಣವೊಂದನ್ನು ಹೇಳಿರುವ ಘೋಷವಾಕ್ಯ. ನಾಯಕನು ಉದಾತ್ತನಾಗಿರಬೇಕು ಎಂಬುದು. ಹಾಗಾದರೆ 'ಉದಾತ್ತ' ಎಂದರೇನು? 'ಉದಾತ್ತ'ದ ನಿರ್ವಚನ ಈ ಹಿಂದಿನ ಪರಂಪರಾಗತ ಕಟ್ಟುವಿಕೆಗಿಂತ ರತ್ನಾಕರನ ನಿರ್ವಚನ ಭಿನ್ನವೇ ಆಗಿದೆ. ವೀರ್ಯದ ನಿರ್ವಹಣೆಯೂ ಭರತೇಶ ವೈಭವದಲ್ಲಿ ಹೊಸ ಅರ್ಥ ಸಾಧ್ಯತೆಗಳನ್ನು ಭರತನ ಮೂಲಕ ವಿಸ್ತರಿಸುತ್ತಾನೆ ರತ್ನಾಕರ. ಪೌರುಷ, ವೀರ್ಯದ ಪ್ರತೀಕವೆಂದು ಭಾವಿಸಿ ಸಾರುವ ಕಥಾನಾಯಕನ ದಿಗ್ವಿಜಯಗಳು, ಯುದ್ಧ, ಶೌರ್ಯದ ವರ್ಣನೆ, ದಾನ, ವೀರ, ಕ್ಷಾತ್ರ, ತ್ಯಾಗ, ಶುಚಿತ್ವಗಳನ್ನು ಬಣ್ಣಿಸುವ ಕಾವ್ಯಗಳು ಒಂದು ವರ್ಗ, ತ್ಯಾಗವನ್ನೋ, ಭಕ್ತಿಯನ್ನೋ, ಕಥಾನಾಯಕನ ಪಾರಲೌಕಿಕ ಸಿದ್ಧಿಯನ್ನೋ ಸಾರುವ ಕಾವ್ಯಗಳು

ಇನ್ನೊಂದು ವರ್ಗ. ಆದರೆ ಈ ಎರಡು ವರ್ಗಗಳಿಗಿಂತ ವಿಶಿಷ್ಟ ಒಳನೋಟಗಳನ್ನುಳ್ಳದ್ದು ರತ್ನಾಕರನ ಕಾವ್ಯ. ತನ್ನ ಕಾವ್ಯದ ಕಥಾನಾಯಕ.

"ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ ಭೂ। ಮಂಡಲವಿದ್ದು ನಿಸ್ಸಂಗ
ಮಂಡೆ ಬೆಳೆದು ಮನ ಬೋಳಾದ ತಪಸ್ವಿ॥

ಎನ್ನುವಲ್ಲಿ ರತ್ನಾಕರ ಭರತನನ್ನು ಒಬ್ಬ ರಾಜಯೋಗಿಯನ್ನಾಗಿಯೇ ಗುರುತಿಸುತ್ತಾನೆ. ಆದಿ ತೀರ್ಥಂಕರನ ಕಥೆಗೆ ಉಪಕಥೆಯಾಗಿ ಬರುವ ಭರತನ ಚರಿತ್ರೆಯನ್ನು ರತ್ನಾಕರ ಮಹಾಕಾವ್ಯದ ಮಟ್ಟಕ್ಕೊಯ್ದದ್ದು, ಅದನ್ನು ಮಹಾಕಾವ್ಯವಾಗಿಸಲು ಸಾಧನವಾಗಿ ಮಧ್ಯಕಾಲೀನ ಕೌಟುಂಬಿಕ ಪರಿಸರವನ್ನು ನಿರ್ಮಾಣ ಮಾಡುವುದರ ಮೂಲಕ ಸಮಕಾಲೀನಗೊಳಿಸುವುದು, ಜೊತೆಗೆ ಕ್ಷಾತ್ರವೀರ ಗುಣಗಳನ್ನೇ ಮೌಲ್ಯಗಳಾಗಿ ಸಾರುವ ಕತೆಯನ್ನು ಶೃಂಗಾರ, ತ್ಯಾಗ, ಭೋಗದ ಮೋಡಿಯನ್ನಾಗಿಸಿದ್ದು ವಿಶೇಷ.
ಕ್ಷತ್ರಿಯೋನ್ನತಿಯನ್ನು ಸಾರುವ ಭರತನ ಸಾಂಪ್ರದಾಯಿಕ ವ್ಯಕ್ತಿತ್ವ ಇಲ್ಲಿ ಶೃಂಗಾರ–ಯೋಗಗಳ ಸಮೀಕರಣವನ್ನು ಸಾಧಿಸಿದ್ದು.... ತನ್ನ ಸಮಕಾಲೀನರಿಗೆ ಇರುಸು ಮುರುಸು ಮಾಡಿರುವುದೇ ಹೆಚ್ಚು.

"ಈ ಕತೆಯನು ನಾನು ಪೇಳ್ವಾಗ ಧರೆಯೊಳ। ನೇಕರು ಹರುಷವೇರಿದರು॥
ನಾಲ್ಕೆಂಟು ಮಂದಿ ಚಿತ್ತದೊಳತಿ ವ್ಯಾಕುಲಂ ಬಟ್ಟರು...."

ಎಂಬ ಮಾತುಗಳು ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತವೆ. ಕಥೆಯ ಮೂಲ ಆಶಯದ ಬಗ್ಗೆ ಸ್ಪಷ್ಟ ಕಲ್ಪನೆಯಿರುವ ರತ್ನಾಕರನಿಗೆ ಶೃಂಗಾರ ಮುಖ್ಯವಲ್ಲ. ಆಧ್ಯಾತ್ಮವೇ ನಿಶ್ಚಿತ ಪ್ರಯೋಜನ. ಜೈನತತ್ವ ಪ್ರಚಾರ, ಉಪದೇಶಗಳ ವಲಯದಿಂದ ದೂರ ಉಳಿಯುವ ರತ್ನಾಕರನಿಗೆ ಮುಖ್ಯವಾಗಿರುವುದು ಯೋಗ–ಭೋಗಗಳೆಂಬ ಎರಡು ಸ್ಥಿತಿಗಳು. ಮಾನವನ ಬದುಕಿಗೆ ಪರಿಪೂರ್ಣತೆಯನ್ನು ತಂದುಕೊಡಬಲ್ಲ ಪರಸ್ಪರ ಪೂರಕ ಅಂಶಗಳು. ಹಾಗಾಗಿ ತನ್ನ ಕಥೆಯಲ್ಲಿನ ಶೃಂಗಾರ ಇತರ ಕಥೆಗಳಲ್ಲಿ ಬರುವ ಶೃಂಗಾರದಂತಲ್ಲ.

ಕೇಳಿರೋ ಭವ್ಯರು ನಿಮಗೊಂದು ಸುಕಥೆಯ। ಹೇಳುವೆನತಿ ಮೃದುವಾಗಿ॥
ಕೇಳಿದಿರಾದರೆ ನಿಮಗಾತ್ಮ ಸುಖವಿಂದು। ನಾಳೆನಾಡಿದನೊಳಗಹುದು॥[೨]

ರತ್ನಾಕರನಿಗೆ ತಾನು ಹೇಳುತ್ತಿರುವುದು ವಿಕಥೆಯಲ್ಲ ಸುಕಥೆ ಎಂಬ ನಂಬಿಕೆಯಿದೆ. ಅಲ್ಲದೆ ತನ್ನ ಕಾವ್ಯದಿಂದೊದಗುವ ಪ್ರಯೋಜನವಾದರೂ ಲೌಕಿಕಕ್ಕೆ ಸಂಬಂಧಿಸಿದ್ದಲ್ಲ. ಆತ್ಮ ಸುಖಕ್ಕೆ ಸಂಬಂಧಿಸಿದ್ದು. ಈ ಆತ್ಮ ಸುಖವೂ ಕಥಾನಾಯಕ ಭರತನಿಗೊದಗಿದಂತೆಯೇ ಕೇಳುಗರಿಗೂ ಓದುಗರಿಗೂ ಇಂದು ನಾಳೆ ನಾಡದ್ದೇ ಒದಗುವಂಥದ್ದು.
ಭರತನನ್ನು ಯೋಗ–ಭೋಗಗಳೆಂಬ ವಿರುದ್ಧ ನೆಲೆಗಳ ಚೌಕಟ್ಟಿಗೆ ರೂಪಿಸಿದುದರ ಪ್ರೇರಣೆ ಯಾವ ತಾತ್ವಿಕ ಪ್ರೇರಣೆಯಿಂದ ಬಂದುದು ಎಂಬುದಕ್ಕೆ ಸ್ಪಷ್ಟ ಉತ್ತರ ಸಾಧ್ಯವಿಲ್ಲವಾದರೂ ರತ್ನಾಕರನ ಘನತೆಯಿರುವುದು ಜೈನ ಮೂಲ ತಾತ್ವಿಕ ಚೌಕಟ್ಟನ್ನು ಮೀರುವಲ್ಲಿ.

ಚಕ್ರಿಯ ಸ್ತ್ರೀರತ್ನ ನರಕಕೊಯ್ವಳು ಎಂದು। ವಕ್ರದೊಳು ಕೆಲವರಾಡುವರು॥
ಅಕ್ರಮವಾ ಮಾತು ಪರ ಸಿದ್ಧಾಂತ ವಾ। ಕ್ಯ ಕ್ರಮವೊಂದುಂಟು ಕೇಳಿ॥

ಈ ಮಾತು ಸಹ ಜೈನಮುನಿಪರಂಪರೆಗೆ ರತ್ನಾಕರನೆಸೆಯುವ ತಾತ್ವಿಕ ಸವಾಲಲ್ಲವೆ? ಕಥೆಯ ಆಯ್ಕೆ, ಕಥೆಯ ನಿರೂಪಣೆ, ಕತೆಯ ತಾತ್ತ್ವಿಕ ಚೌಕಟ್ಟು, ಪಾತ್ರ ಪರಂಪರೆ, ವ್ಯಕ್ತಿತ್ವಗಳ ನಿರ್ಮಾಣಗಳು ಈ ಹಿಂದಿನ ಸಾಹಿತ್ಯ ಪರಂಪರೆಯನ್ನು ಸಂಪೂರ್ಣ ಮೀರಿದುದೇಕೆ? ಎಂಬುದು ದೊಡ್ಡ ಪ್ರಶ್ನೆಯಾದರೆ, ಈ ಬದಲಾವಣೆಯ ಪ್ರಕ್ರಿಯೆಗಳೇನಿದ್ದರೂ ಭರತನ ಮೇಲ್ಮೆಯನ್ನು ಸಾರಲು ಸೃಷ್ಟಿಸಿದವುಗಳಿರಬಹುದೆ? ಎಂಬುದು ಮತ್ತೊಂದು ಪ್ರಶ್ನೆ.
ರತ್ನಾಕರ 'ಧ್ಯಾನಕ್ಕೆ ಬೇಸರಾದಾಗ ನನ್ನಾತ್ಮಲೀಲಾನುವೃದ್ಧಿಗೆ ಪೇಳ್ದೆನೈಸೆ' ಧ್ಯಾನಕ್ಕೆ ಬೇಸರಾಗದ ಎಂಬ ಮಾತೇ ಬೆಚ್ಚಿ ಬೀಳಿಸುವಂತದ್ದು. ಜೈನ ವಲಯದಲ್ಲಿ ಧ್ಯಾನಕ್ಕೆ ಬೇಸರವೆಂಬ ಮಾತೇ ಬರಕೂಡದು. ಬಂದರೂ ಅದನ್ನು ಆಡಿ ತೋರಿಸುವ ಧಾರ್ಷ್ಟ್ಯವನ್ನು ಮೆರೆಯಕೂಡದು. ಆದರೆ ರತ್ನಾಕರನ ಬಿಚ್ಚು ಮನಸ್ಸಿನ ಈ ಮಾತು ಜೈನಮುನಿಗಳ ನಿರಂತರ ಅರ್ಥಹೀನ ದಿನಚರಿ ಮತ್ತು ಬರಡುಧ್ಯಾನಕ್ಕೆ ಪ್ರತಿರೋಧದ ರೂಪದಲ್ಲಿ ವಿಶ್ಲೇಷಿಸಬಹುದಾದದ್ದು. ಹಾಗೆಂದು ರತ್ನಾಕರ ಇದರಿಂದ ದೂರ ಸರಿದಿದ್ದಾನೆಂದಲ್ಲ. ಕಾವ್ಯದಲ್ಲಿ ಬರುವ ಆತ್ಮತತ್ವ ವಿಚಾರಗಳೆಲ್ಲವೂ ಪಾರಂಪರಿಕ ಜೈನ ಆಗಮೋಕ್ತ ನೆಲೆಯಿಂದಲೇ ರೂಪಿತವಾದವು. ಆದರೆ ರತ್ನಾಕರ ಆ ತತ್ವಗಳಿಗೆ ಹೊಸ ಪರಿಭಾಷೆಗಳನ್ನು ಕೊಟ್ಟಿದ್ದಾನೆ. ಧ್ಯಾನದಂತೆ ಕಾವ್ಯವೂ ಆತ್ಮೋನ್ನತಿಗೆ ಸಾಧನವಾದುದೆನ್ನುವ ರತ್ನಾಕರ ಧಾರ್ಮಿಕ ಆವರಣದಿಂದ ದೂರ ಸರಿಯುವುದಿಲ್ಲ. ಬದಲಿಗೆ ಬದುಕಿನ ಜೀವಂತಿಕೆಯನ್ನು ಕಾವ್ಯದುದ್ದಕ್ಕೂ ತುಂಬುತ್ತಾನೆ.
ರತ್ನಾಕರನ ನಾಯಕ ಪ್ರಥಮ ತೀರ್ಥಂಕರನ ಮಗ. ಪ್ರಥಮ ಚಕ್ರವರ್ತಿ. ಹದಿನಾರನೆಯ ಮನು. ಮೂಲದಲ್ಲಿ ಆದಿ ತೀರ್ಥಂಕರನ ಕಥೆಗೆ ಉಪಕಥೆಯಾಗಿ ಬರುವ ಭರತನ ಚರಿತೆಯನ್ನು ಪ್ರತಿನಾಯಕನಾಗಿ ಕಾಣಿಸಿಕೊಳ್ಳುವ ಭರತನನ್ನು ರತ್ನಾಕರ ಕಥೆಯ ಕೇಂದ್ರಕ್ಕೆ ತಂದು ನಿಲ್ಲಿಸುತ್ತಾನೆ. ಕಥೆಯನ್ನು ತನ್ನ ಆಶಯಗಳಿಗೆ ಅನುಗುಣವಾಗಿ ಸಂಪೂರ್ಣ ಸ್ವಾತಂತ್ರ್ಯವಹಿಸಿ ಬದಲಾಯಿಸಿಕೊಳ್ಳುತ್ತಾನೆ. ಹಾಗಾಗಿ ಮೂಲ ಕಾವ್ಯಗಳೊಂದಿಗೆ ರತ್ನಾಕರನ ಕಾವ್ಯವನ್ನು ಹೋಲಿಸುತ್ತಾ ಹೋದಂತೆ ರತ್ನಾಕರನು, ರತ್ನಾಕರನು ಸೃಷ್ಟಿಸಿದ ಭರತನು ಹೊಸ ಚಹರೆಗಳೊಂದಿಗೆ ಕಾಣಿಸಿಕೊಳ್ಳುತ್ತಾರೆ.
ರತ್ನಾಕರನ ನಾಯಕ ಅಲೌಕಿಕ ಸಿದ್ಧಿಪುರುಷ(ಶೃಂಗಾರ ಯೋಗಿ–ಅಧ್ಯಾತ್ಮನುರಾಗಿ). ಭರತನ ಯೋಗ ಸಾಧನೆಗಳ ಕುರಿತು ಓದುಗನಲ್ಲಿ ಸಂದೇಹಗಳುಂಟಾದಾಗಲೂ ಕಾವ್ಯದ ಆರಂಭದಲ್ಲಿಯೇ ತನ್ನ ಕಥಾನಾಯಕನ ಜನ್ಮ, ರೂಪ, ಗುಣ ವಿಶಿಷ್ಟತೆಗಳನ್ನು ಪರಿಚಯಿಸುವ ರತ್ನಾಕರ ಆತನ ಯೋಗ–ಭೋಗ ಸಿದ್ಧಿಗಳ ಮಹತಿಯನ್ನು ಯಾವುದೇ ಸಂದೇಹಗಳಿಲ್ಲದೆ ಸೂತ್ರೀಕರಿಸುತ್ತಾನೆ. ಹಾಗಾಗಿ ಆತ ಪ್ರಶ್ನಾತೀತನೇ ಆಗುತ್ತಾನೆ. ರತ್ನಾಕರ ಇದನ್ನು ಕಾವ್ಯದ ಆರಂಭದಲ್ಲಿಯೇ ಹೇಳಿ ಕಾವ್ಯ ಪ್ರವೇಶಕ್ಕೆ ನಮ್ಮ ಮನಸ್ಸುಗಳನ್ನು ಹಣಿಗೊಳಿಸುತ್ತಾನೆ. ಹಾಗಾಗಿ ಕಾವ್ಯದ ಕಥಾನಾಯಕನ ವಾಸ್ತವದ ಪ್ರಶ್ನೆಯೇ ಹೇಳುವುದಿಲ್ಲ. ತೊಂಬತ್ತಾರು ಸಾವಿರ ಹೆಂಡತಿಯರು, ಕತ್ತಿ ಹಿಡಿಯದೆಯೇ ಷಟ್ಖಂಡಗಳ ಒಡೆತನ ದಕ್ಕುವುದು, ತನ್ನ ಕಿರು ಬೆರಳಿನಿಂದಲೇ ಚತುರ್ಬಲವನ್ನು ಮಕಾಡೆ ಮಲಗಿಸಬಲ್ಲ ಸಾಮರ್ಥ್ಯ ಎಲ್ಲವೂ ಸಾಧ್ಯವಾಗುತ್ತದೆ. ಹಾಗಾಗಿ ಅವಾಸ್ತವಿಕ ವಿಚಾರಗಳನೇಕವು ಪ್ರಶ್ನಾತೀತವೇ ಆಗುತ್ತವೆ.
ಹಂಸತತ್ವದ ಮೂಲಕ ಕ್ಷಣಿಕೆ ಮುಕ್ತಿಗೆ ಸಂದ ಭರತನ ವ್ಯಕ್ತಿತ್ವ ರತ್ನಾಕರನನ್ನು ಆಕರ್ಷಿಸಿದೆ. ಹಾಗಾಗಿ ರತ್ನಾಕರ ತನ್ನ ನಾಯಕನನ್ನು

ಸಮರ್ಥಿಸುವಲ್ಲಿಯೂ ಭರತನ ನಾಯಕತ್ವವನ್ನು ಸಮರ್ಥಿಸುವಲ್ಲಿಯೂ

ಚಿಂತಿಸಿ ರಾಜ್ಯವನಾಳ್ದನೆ ತಪದೊಳು। ಮುಂತಾಗಿ ಮುಕ್ತಿಗೈಯ್ದಿದನೆ॥
ಸಂತೋಷದೊಳಗಿರ್ದು ಸಂತೋಷದೊಳೆ ಪೋದೆ ಹೊಂತಕಾರಿಗೆ ಸಾಟಿಯಾರು॥
ಮೆಯ್ಯ ದಂಡಿಸಿದನೆ ಭಿಕ್ಷೆಗೆಂದು ಒರ್ವರ್ಗೆ। ಕೈಯೊಡ್ಡಿದನೆ ಚಕ್ರಧರನು॥
ಉಯ್ಯಲ ತೂಗಿದಂತೆ ಅಮೃತಕ್ಕೆ ಸಂದ। ಬಲ್ಗೆಯನಲ್ಲವೆ....॥
ತಿರಿದುಂಡುದಿಲ್ಲ! ತಪೋಮುದೆಯಾಂತಿಪ್ಪು ತಿರುಗಾಡಿತಿಲ್ಲ ದೇಶದೊಳು।
ಸಿರಿಯೊಳಿರ್ದನು ಸಿರಿಯೊಳೆ ಪೋಗಿ ಮುಕ್ತಿಯ। ಸಿರಿಯಾಳ್ದನ ಹೊಪುರೆಯೆಂದಾ।

ವ್ಯಕ್ತ ಭೋಗದೊಳಿದ್ದು ಮುಕ್ತಿಗೆ ಸಂದ ಭರತನ ಯುಕ್ತಿಗೆ ರತ್ನಾಕರ ಮನಸೋತಿದ್ದಾನೆ.

ಅರಸಿಯ ನಿಬ್ಬರನು ಆಳ್ದಯ್ಯ ಸಾವಿರ। ವರುಷ ತಪಸು ಮಾಡಿ ಗೆಲ್ದಾ।
ಅರರೇ ಲಕ್ಷ್ವಾಂಗನೆಯರ ನಾಳ್ದು ಕ್ಷಣದೊಳ್ ಈ। ಪರಿಯಾದುದಿದು ಚೋದ್ಯವಲ್ತೆ॥

ಎನ್ನುವ ರತ್ನಾಕರ ಭರತನ ವಿಶಿಷ್ಟ ವ್ಯಕ್ತಿತ್ವಕ್ಕೆ ನಿಬ್ಬೆರಗಾಗುತ್ತಾನೆ. ಕ್ಷಣಕ್ಕೆ ಮುಕ್ತಿಯ ಕಂಡ ಭರತನ ವ್ಯಕ್ತಿತ್ವ "ಶ್ರೀ ನಾರೀಪತಿ... ಜಗಕ್ಕಾರ್ಶಯ ಮಾಯ್ತೀಶನ"[೩] ಎನ್ನುವಂತೆ ಜಿನಸೇನಾಚಾರ್ಯರನನ್ನೂ ಆಕರ್ಷಿಸಿದೆ.

ಅರಸಿಯರಿಬ್ಬರನು ಆಳ್ದಯ್ಯ ಸಾವಿರ ವರುಷ ತಪಸ್ಸು ಮಾಡಿ ಮುಕ್ತಿಗೆ ಸಂದರೆ ಲಕ್ಷ್ವಾಂಗರೆಯನಾಳ್ದ ತನ್ನ ನಾಯಕ ಕ್ಷಣದಲ್ಲಿ ಮುಕ್ತಿಗೆ ಸಂದ ಪರಿಯೆಂತು? ನಾಯಕನ ಭೇದವಿಜ್ಞಾನ, ಪರಿಜ್ಞಾನ, ಹಂಸನೀತಿ ತತ್ವ ಈ ಔನ್ನತ್ಯಕ್ಕೆ ಸಹಕರಿಸಿದವಲ್ಲವೆ? ಇಲ್ಲಿಯೂ ಜೈನ ತಾತ್ವಿಕ ಪರಿಭಾಷೆಗಳಾದ ಭೇದವಿಜ್ಞಾನ, ಹಂಸಕಲೆಗಳೇ ಯೋಗ–ಭೋಗಗಳೆರಡನ್ನೂ ಏಕಕಾಲಕ್ಕೆ ಸಾಧಿತವಾಗಿಸಿಕೊಳ್ಳಲು ಸಾಧನಗಳಾಗುತ್ತವೆ. ಭೇದವಿಜ್ಞಾನದ ನೆಲೆಯಲ್ಲಿ ಪೂರ್ವಪುಣ್ಯ ಕರ್ಮ ಸಂಚಯವನ್ನೂ, ವರ್ತಮಾನದ ಪುಣ್ಯ ಕರ್ಮವನ್ನೂ ನಿರ್ಜರೆಯ ಮೂಲಕ ಕಳಚಿಕೊಳ್ಳಬಲ್ಲನಾದ. ಸಂವರೆಯ ಮೂಲಕ ತಡೆಯಬಲ್ಲನಾದ ಭರತ. ಹಾಗಾಗಿಯೇ ಸಕರ್ಮ, ಅಕರ್ಮಗಳನ್ನು ಇತರ ಜೈನ ನಾಯಕರು ದೀರ್ಘ ತಪದ ಮೂಲಕ ಸಾಧಿತವಾಗಿಸಿಕೊಂಡಂತೆ ಸಾಧಿತವಾಗಿಸಿಕೊಳ್ಳದೆ ಭೇದವಿಜ್ಞಾನ, ಹಂಸತತ್ವದ ಮೂಲಕ ಭರತ ಅಂದಂದಿಗೇ ಅವುಗಳನ್ನು ಕಳಚಿಕೊಂಡು ಶುದ್ಧಾತ್ಮನಾಗಿ ಕ್ಷಣದ ಮುಕ್ತಿಗೆ ಭಾಜನನಾಗುತ್ತಾನೆ. ತೀರ್ಥಂಕರ ಜೀವಕ್ಕೆ ಸಲ್ಲಬಹುದಾದ ಜೈನ ಸಾಂಪ್ರದಾಯಿಕ ಪಂಚಕಲ್ಯಾಣಗಳನ್ನು ಭರತನ ಜೀವನ ಯಾತ್ರೆಗೆ ಆರೋಪಿಸುವ ರತ್ನಾಕರ

ಭೋಗವಿಜಯ ಪೂರ್ವವಾಗಿ ದಿಗ್ವಿಜಯ ಸು। ಯೋಗ ವಿಜಯ ಮೋಕ್ಷ ವಿಜಯ॥
ಈಗರ್ಕ ವಿಜಯವಾಗೆ ಮನಸಿಗೆ। ಲಾಗಾಯ್ತು ಪಂಚಕಲ್ಯಾಣ॥

ಎಂಬುದಾಗಿ ಪಂಚ ವಿಜಯಗಳಲ್ಲಿ ಕಾವ್ಯದ ವಸ್ತುವನ್ನು, ಭರತನ ಜೀವನವನ್ನು ಹರಡುತ್ತಾನೆ. ಇವು ಮನುಷ್ಯನ ಮಾನಸಿಕ ಅವಸ್ಥಾಭೇದಗಳನ್ನೇ ನೆನಪಿಸುತ್ತವೆ.

ರತ್ನಾಕರ ಒಂದು ಆದರ್ಶಪೂರಿತ ಭಿತ್ತಿಯ ಮೇಲೆ ಭರತನನ್ನು ಚಿತ್ರಿಸುತ್ತಾನೆ. ಇದು ಒಂದು ರೀತಿಯಲ್ಲಿ ಲೌಕಿಕ ವ್ಯಕ್ತಿತ್ವಕ್ಕೆ ಅಲೌಕಿಕ ಪರಿವೇಷವೊಂದರ ಅಪಾದನೆಯೇ ಆಗುತ್ತದೆ. ಜಿನಸೇನ ಪಂಪರ ಭರತ ಮಹಾಪರಾಕ್ರಮಿಯಾಗಿ ವೀರಶೌರ್ಯದ ಪ್ರತೀಕವಾಗಿ ಚಕ್ರವರ್ತಿಯ ಆಟಾಟೋಪಗಳೊಂದಿಗೆ ಚಿತ್ರಿಸಲ್ಪಟ್ಟರೆ ರತ್ನಾಕರನ ಭರತೇಶ ಕುಟುಂಬವೊಂದರ ಯಜಮಾನನಂತೆ, ಸಮುದಾಯವೊಂದರ ಹಿರಿಯನಂತೆ ಕಂಡು ಬರುತ್ತಾನೆ. ಭರತನನ್ನು ಕಾವ್ಯದ ಕೇಂದ್ರ ಆಕರ್ಷಣೆಯ ಬಿಂದುವಿನಲ್ಲಿ ನಿಲ್ಲಿಸುವ ರತ್ನಾಕರ ಕಾವ್ಯದ ಬಹುತೇಕ ಪಾತ್ರಗಳನ್ನು ಭರತನ ಪ್ರಭಾವಳಿಯಲ್ಲಿ ಕಳೆಗುಂದುವಂತೆ ಮಾಡುತ್ತಾನೆ.

ಜಿನಸೇನ ಪಂಪರ ಅಖಾಡದಲ್ಲಿ ಭರತ ಸೋತು ಬಾಹುಬಲಿ ಗೆದ್ದರೆ ರತ್ನಾಕರನಲ್ಲಿ ಭರತ ಅಖಾಡಕ್ಕಿಳಿಯದೆಯೇ ಗೆಲ್ಲುತ್ತಾನೆ. ಬಾಹುಬಲಿ ಸೋಲುತ್ತಾನೆ. ಅದೂ ಬಾಹುಬಲಿಯನ್ನು ಸೋಲಿಸಿದ್ದಾದರೂ ಹೇಗೆ?

ರಣಭಂಗವಾರದು ತಮ್ಮಗೆಂದು ಸ। ದ್ಗುಣ ವಚನದಿ ಜಯಿಸಿದನು ।
ಕ್ಷಣದಿ ಮುಕ್ತಿಯ ಕೊಂಬ ಮೃದು। ಹೃದಯಗೆ ಕ್ರೂರಗುಣವುಂಟೇ॥

ಎಂಬುದು ಕವಿಯ ಸಮರ್ಥನೆ. ಜಿನಸೇನ–ಪಂಪರಲ್ಲಿ ಭರತನ ರಾಯಭಾರಿಯನ್ನು ಗೌರವದಿಂದ ಕಂಡು ಭರತನ ಕ್ಷೇಮಸಮಾಚಾರ–ದಿಗ್ವಿಜಯಗಳ ವಿವರಗಳನ್ನು ಕೇಳಿ ಸಂತೋಷ ಪಡುವ ಬಾಹುಬಲಿ ಇಲ್ಲಿ ರತ್ನಾಕರವರ್ಣಿಯ ಪಕ್ಷಪಾತದಿಂದಾಗಿ ಮತ್ಸರ, ಅಸೂಯೆ, ಕುಹಕ, ಕಠೋರತೆಗಳ ಆಗರವಾಗುತ್ತಾನೆ. ಜಿನಸೇನ–ಪಂಪರು ಸಮುದಾಯ ಹಿಂಸೆಯನ್ನು ದೂರ ಮಾಡಲು ದೃಷ್ಟಿ, ಜಲ, ಮಲ್ಲ ಯುದ್ಧಗಳ ಮೂಲಕ ವ್ಯಕ್ತಿ ಕೇಂದ್ರಿತ ನೆಲೆಗೆ ಹಿಂಸೆಯನ್ನು ಸೀಮಿತಗೊಳಿಸಿದರೆ ರತ್ನಾಕರ ತನ್ನ ಕಾವ್ಯದಲ್ಲಿ ವ್ಯಕ್ತಿ ನೆಲೆಯ ಹಿಂಸೆಯನ್ನೂ ದೂರ ಮಾಡ ಬಯಸುತ್ತಾನೆ.

ಪಂಪನಲ್ಲಿ ಯುದ್ಧ ಪ್ರಸಂಗ, ಅದರ ಪರಿಣಾಮಗಳು ಬಾಹುಬಲಿಯ ನಿರ್ವೇಗಕ್ಕೆ ದಾರಿ ಮಾಡಿಕೊಟ್ಟರೆ ರತ್ನಾಕರನಲ್ಲಿ ಈ ಯಾವ ಅನುಭವಗಳ ಪರಿಣಾಮ, ಮಾಗುವಿಕೆಯೂ ಇಲ್ಲದೆಯೇ ಜಿಗುಪ್ಸೆಗೊಂಡು ವೈರಾಗ್ಯಪರನಾಗುವುದು ಕಾವ್ಯ ಪರಿಣಾಮದ ಸಾಂದ್ರತೆಯನ್ನು ತೆಳುಗೊಳಿಸುತ್ತದೆ. ದಿಗ್ವಿಜಯದ ಪ್ರಸಂಗದಲ್ಲಿ ಎಲ್ಲಿಯೂ ಯುದ್ಧದ ನಿನದಗಳು ಕೇಳಿಸದಂತೆ ಎಚ್ಚರವಹಿಸುವ ರತ್ನಾಕರ ಅಲ್ಲೆಲ್ಲಿಯೂ ಮಾನವೀಯ ಕೌಟುಂಬಿಕ, ಅನುಕಂಪಗಳ ಬೆಸುಗೆಗಳನ್ನೇ ಕಾವ್ಯದುದ್ದಕ್ಕೂ ತುಂಬಿಕೊಳ್ಳುವುದರಿಂದಾಗಿ ಅವು ಅತಿರಂಜಿತವೆನಿಸಿ ಕೆಲವೊಮ್ಮೆ ಓದುಗನ ನಿರೀಕ್ಷೆಯನ್ನು ಹುಸಿಗೊಳಿಸುತ್ತವೆ.

ಅಷ್ಟೇ ಅಲ್ಲದೆ ಇಲ್ಲಿಯ ಭರತ ಷಟ್ಖಂಡಗಳ ಒಡೆಯ ಚಕ್ರವರ್ತಿಯಂತೆ ಕಾಣುವುದಿಲ್ಲ. ಸುತ್ತಲಿನ ಆವರಣವನ್ನು ಅದೆಷ್ಟೇ ಅದ್ದೂರಿಯಾಗಿ ಚಿತ್ರಿಸಿದರೂ ಕಾವ್ಯದ ಓದು ಕೊಡುವ ಅನುಭವ ಮಾತ್ರ ಮಧ್ಯಕಾಲೀನ ಸಾಮಂತರಸರ ಜೀವನ ಕ್ರಮ, ಆಲೋಚನಾ ಕ್ರಮ, ಪರಿಸರ ಭಾವಜಾಲಗಳನ್ನೇ ಅನುಭವಕ್ಕೆ ತರುತ್ತದೆ. ಇದು ಭರತನ ಮಿತಿಯೆಂಬುದಕ್ಕಿಂತ, ರತ್ನಾಕರನ ಅನುಭವದ ಮಿತಿಯೂ ಹೌದು. ಜೊತೆಗೆ ದೇಶಿ ಭಾಷಾ ಸ್ವರೂಪದಲ್ಲಿನ, ದೇಶಿ ಛಂದೋ ಸ್ವರೂಪದಲ್ಲಿನ ಮಿತಿಯೂ ಆಗಿರಬಹುದು.

ಚಕ್ರವರ್ತಿಯೊಬ್ಬನ ಯುದ್ಧ ಸಂದರ್ಭದಂತಹ ಗಂಭೀರ ಸನ್ನಿವೇಶದಲ್ಲಿಯೂ ಭರತ ಬಾಹುಬಲಿಯೊಂದಿಗೆ ಮುಖಾಮುಖಿಯಾದಾಗ ಭರತ ಹೇಳುವ ಮಾತುಗಳನ್ನು ನೋಡಿ.

ಹಾಗದ ತೆರಿಗೆ ಬೇಕೆಂದು ನಾ ನಿನ್ನೂರ। ಬಾಗಿಲ್ಗೆ ಭಟರನ್ನಟ್ಟಿದೆನೆ॥
ಕೇಳಣ್ಣ ಚಕ್ರವ ಬಯತಿಸಿಲ್ಲಾನು ಶ। ಸ್ತ್ರಾಲಯದೊಳು ತಾನೆ ಹುಟ್ಟಿ।
ಎಳಸಿ ನಾಡ ಸುತ್ತಿಸಿತು ನಿಮ್ಮೆಲ್ಲ। ಕಾಲಿಗೆ ನೋವಾಗುವಂತೆ॥

ಎಂದು ಒಬ್ಬ ಸ್ಥಾನಿಕ ಪಾಳೇಗಾರ ಮಾತನಾಡುವಂತೆ ಮಾತನಾಡುತ್ತಾನೆ. ಭರತನ ದಿಗ್ವಿಜಯಗಳು ವಸಂತೋತ್ಸವಗಳಾಗಲು ರತ್ನಾಕರನ ಕಾವ್ಯೋದ್ದೇಶ ಕಾರಣವಾದಾಗಲೂ ರತ್ನಾಕರನಿಗೆ ಸಮಕಾಲೀನ ರಾಜರ ವೀರ ವ್ಯಕ್ತಿತ್ವಗಳಾವುವು ಪ್ರಭಾವ ಬೀರಿದಂತೆ ಕಂಡು ಬರುವುದಿಲ್ಲ ಅವರ ಭೋಗ ಜೀವನವನ್ನು ಹೊರತುಪಡಿಸಿ. ವಿಜಯನಗರ ಅರಸರ ಭೋಗ ಜೀವನ ತೋರಿದ ಪ್ರಭಾವ ಅದೇ ಮಧ್ಯಕಾಲೀನ ಭಕ್ತಿ ಚಳುವಳಿ ಈ ಜೈನ ಕಾವ್ಯದ ಮೇಲೆ ಯಾವುದೇ ಗಾಢ ಪರಿಣಾಮಗಳನ್ನು ಬೀರಿದಂತೆ ಕಂಡುಬರುವುದಿಲ್ಲ.

ಆದಿತೀರ್ಥಂಕರ, ಭರತ, ಬಾಹುಬಲಿಯರ ಸಂಬಂಧಗಳನ್ನು ಕೇಂದ್ರವಾಗಿಸಿಕೊಂಡು ನೋಡಿದ್ದಾದಲ್ಲಿ ವೈದಿಕ ಸಂಸ್ಕೃತಿಗೆ, ತಾತ್ವಿಕತೆಗೆ, ದಾರ್ಶನಿಕತೆಗೆ ಸವಾಲಾಗಿ ಮೊದಲ ಬಾರಿಗೆ ಪರ್ಯಾಯ ಸಂಸ್ಕೃತಿಯೊಂದನ್ನು ಹುಟ್ಟು ಹಾಕುವ ಆದಿದೇವನಿಗೆ ತನ್ನ ಮೊದಲ ತಲೆಮಾರಿನಲ್ಲಿ ಬದಲಾವಣೆಯ ಸ್ವೀಕಾರದ ಸಂದರ್ಭದಲ್ಲಿ ಸಂಘರ್ಷ ಸಹಜ. ಚಾತುರ್ವರ್ಣ್ಯವನ್ನು ಪುನಃ ಸ್ಥಾಪಿಸುವ ಭರತ ಸಹಜವಾಗಿಯೇ ಇಂತಹ ಸಂದರ್ಭದಲ್ಲಿ ಧಾರ್ಮಿಕ ಪರಿಧಿಯಿಂದ ಹೊರಗುಳಿಯುತ್ತಾನೆ. ಆದಿನಾಥನ ಇತರ ಕುಟುಂಬದ ಸದಸ್ಯರೆಲ್ಲರೂ ಭರತನ ಇಹಪರವಾದ ತಾತ್ವಿಕತೆಯಿಂದ ದೂರ ಸರಿಯುವುದರ ಮೂಲಕ ಆದಿನಾಥನ ಶ್ರವಣ ಪರಂಪರೆಯನ್ನು ಪುರಸ್ಕರಿಸುತ್ತಾರೆ. ಜೀವನದ ಕೊನೆಯಲ್ಲಿ ಭರತನೂ ಅದೇ ಮಾರ್ಗವನ್ನು ಅನುಸರಿಸುತ್ತಾನೆ. ಆದರೆ ರತ್ನಾಕರವರ್ಣಿ ಭರತನ ಈ ಸಂಘರ್ಷ ಮತ್ತು ಸಮನ್ವಯಗಳಿಗೆ ಯೋಗಭೋಗದ ಒಂದು ತಾರ್ಕಿಕ ಚೌಕಟ್ಟನ್ನು ಒದಗಿಸುತ್ತಾನೆನಿಸುತ್ತದೆ. ತನ್ನ ಕುಲಬಾಂಧವರಿಂದ ಹೊರುಗಳಿದ ಭರತನಿಗೆ ಅವರ ತಾತ್ವಿಕ ತಾಕಲಾಟಗಳಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡುತ್ತಾನೆ.

ಆಯುಧಾಗಾರದ ಚಕ್ರರತ್ನವು ಜೈನರ ಪರಿಕಲ್ಪನೆ. ಇದು ವೈದಿಕ ಸಂಸ್ಕೃತಿಯ ಅಶ್ವಮೇಧ ಯಾಗವನ್ನು ನೆನಪಿಸುತ್ತದೆ. ಯಜ್ಞ ಅಶ್ವಮೇಧ ಕುದುರೆಯ ಪ್ರತೀಕವಾಗಿ, ಅಹಿಂಸೆಯ ದ್ಯೋತಕವಾಗಿ ಈ ಪರಿಕಲ್ಪನೆ ಜೈನರಲ್ಲಿ ಹುಟ್ಟಿಕೊಂಡಿರಬೇಕು. ಮಹಾಪುರಾಣ ಮತ್ತು ಆದಿಪುರಾಣಗಳ ಪ್ರಕಾರ ಭರತೇಶ್ವರನಿಗೆ ಮೂರು ಮಹಾಸೌಭಾಗ್ಯಗಳು(?) ಒಮ್ಮೆಗೇ ಒದಗುತ್ತವೆ. ಆದಿನಾಥನಿಗೆ ಕೇವಲಜ್ಞಾನ ಪ್ರಾಪ್ತಿ, ಚಕ್ರರತ್ನ ಪ್ರಾಪ್ತಿ ಮತ್ತು ಪುತ್ರರತ್ನ ಪ್ರಾಪ್ತಿ– ಇವು ಆ ಮಹಾ ಸೌಭಾಗ್ಯಗಳು. ದಿಗ್ವಿಜಯಕ್ಕೆ ಕಾರಣವಾದ ಈ ಚಕ್ರರತ್ನದ ಸಂಗಡ ಭರತ ಚಕ್ರಿಗೆ ಛತ್ರರತ್ನ, ಖಡ್ಗರತ್ನ, ದಂಡರತ್ನ, ಚರ್ಮರತ್ನ, ಮಣಿರತ್ನ, ಕಾಕಿಣೀರತ್ನ, ಗೃಹಸತಿರತ್ನ, ಸೇನಾನಿ ರತ್ನ, ತಕ್ಷಕ ರತ್ನ, ಪುರೋಹಿತ ರತ್ನ, ಹಸ್ತಿ ರತ್ನ, ತುರಗ ರತ್ನ, ಸ್ತ್ರೀ ರತ್ನ ಮೊದಲಾದ ಹದಿನಾರು ರತ್ನಗಳು ಪ್ರಾಪ್ತವಾಗುತ್ತವೆ. ದಿಗ್ವಿಜಯ, ಸಾಮ್ರಾಜ್ಯ ವಿಸ್ತರಣೆ ಆಕ್ರಮಣಕಾರಕ ಪರಿಕಲ್ಪನೆಗಳಿಗೆ ಪೋಷಕವಾಗಿಯೇ ಇವು ಹುಟ್ಟಿಕೊಂಡವುಗಳು. ಚಕ್ರವರ್ತಿಯೊಬ್ಬನ ಸಾಮ್ರಾಜ್ಯ ವಿಸ್ತರಣಾಕಾಂಕ್ಷೆಗೆ, ಆಕ್ರಮಣ ವ್ಯವಸ್ಥೆಗೆ, ಏಕ ಚಕ್ರಾಧಿಪತ್ಯ ನಿರ್ಮಾಣಕ್ಕೆ ಇವು ಪ್ರತಿನಿಧಿಗಳಾಗುತ್ತವೆ. ಪಂಪ ಈ ಚಕ್ರರತ್ನದ ಕುರಿತು

ನೆಲನಾಕಾಶಂ ದಿಶಾಮಂಡಲಮೆನಿತನಿತುಂ ಚಕ್ರವರ್ತಿ ಪ್ರತಾಪಾ।
ನಲ ತೀವ್ರಜ್ವಾಲೆಯಿಂ ಪರ್ವುವುದನಿದುವೆ ಪೇಳ್ದಿಪ್ಪುದೆಂಬಂತಿರೌರ್ವ॥
ಜ್ವಲನ ಜ್ವಾಲಾಕಲಾಪೋದ್ಗಮಮನನುಗುಣಂ ಮಾಡುತಂ ದ್ವಾದಶಾರ್ಕೋ।
ಜ್ವಲ ತೇಜಶ್ಚಕ್ರರೂಪಂ ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ॥

ಚಕ್ರರತ್ನದ ತೇಜಸ್ಸು ದ್ವಾದಶಾದಿತ್ಯರ ಸಮನಾಗಿತ್ತೆಂದು ವರ್ಣಿಸುತ್ತಾನೆ. ಜೊತೆಗೆ ಅದರ ಸ್ವರೂಪವನ್ನು ಕುರಿತು

ಹತವೈರಿ ಕ್ಷತಚಕ್ರಂ ಭಯಚಕಿತ ಜಗದ್ವೀರಚಕ್ರಂ ವಿನಮ್ರ।
ಕ್ಷಿತಿಚಕ್ರಂ ದೀಪ್ತದೀಪ್ತಿ ಪ್ರತಿಹತ ದಿನಕೃಚ್ಚಕ್ರ ತೀವ್ರಾಂಶುಚಕ್ರಂ॥
ಜಿತದಿಶ್ಚಕ್ರಂ ಪ್ರಭಾಪ್ರಜ್ವಲಿತ ದಶದಿಶಾಚಕ್ರಮುಗ್ರ ಪ್ರತಾಪೋ।
ರ್ಜಿತ ತೇಜಶ್ಚಕ್ರಮಿರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ॥

ಇದನ್ನೇ ಅನುಸರಿಸುವ ರತ್ನಾಕರ

ಚಕ್ರಿಗೆರಗಿದವರುರ್ವಿಯೊಳ್ನಡೆವುದು। ವಕ್ರಿಸಿದವರ ಸೀಮೆಯೊಳು।
ಚಕ್ರಪೋಗದೆ ನಿಲ್ವುದಾ.....

ಹೀಗಾಗಿ ಇವುಗಳೆಲ್ಲವುಗಳ ಹಿನ್ನೆಲೆಯಲ್ಲಿ ನೋಡಿದಾಗ ಚಕ್ರರತ್ನ, ಚಕ್ರರತ್ನ ಕಾರಣವಾಗಿ ಹಮ್ಮಿಕೊಳ್ಳುವ ಭರತನ ದಿಗ್ವಿಜಯ ಸಾಮ್ರಾಜ್ಯಶಾಹಿ ದ್ಯೋತಕವಾಗಿಯೇ ಜೈನ ಪರಿಕಲ್ಪನೆಯಲ್ಲಿ ವೈದಿಕ ಅಶ್ವಮೇಧ ಯಾಗದ ಧೋರಣೆಯನ್ನೇ ಅನುಸರಿಸುತ್ತಾ ಭಿನ್ನ ಪರಿಕಲ್ಪನೆಯೊಂದಿಗೆ ಮೂಡಿ ಬಂದವುಗಳೆಂಬುದು ನನ್ನ ಅಭಿಪ್ರಾಯ. ತನ್ನ ಕಾವ್ಯದಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿಕೊಳ್ಳುವ ರತ್ನಾಕರ ಚಕ್ರರತ್ನದ ಸಂದರ್ಭದಲ್ಲಿ ಮಾತ್ರ ಹಿಂದಿನ ಪರಂಪರೆಯನ್ನೇ ಅನುಸರಿಸುತ್ತಾನೆ. ಜೀವಪರ ಧೋರಣೆಯುಳ್ಳ ರತ್ನಾಕರ ಹಿಂಸೆಯನ್ನು ತಡೆಯುತ್ತಾನಾದರೂ ಚಕ್ರರತ್ನದ ಜೀವ ವಿರೋಧಿ ಧೋರಣೆಗಳನ್ನು ಮಾತ್ರ ಹಾಗೆಯೇ ಉಳಿಸಿಕೊಳ್ಳುತ್ತಾನೆ.

ಜೈನ ಧಾರ್ಮಿಕ ವಲಯ, ಜೈನ ತಾತ್ವಿಕ ವಲಯ ಸದಾ ಭರತನ ಸುತ್ತಲೂ ನಿರ್ಮಾಣವಾಗಿರುತ್ತದೆ. ಮತ್ತು ಅದೊಂದು ಜೈನಕೃತಿಯೆಂಬುದನ್ನು ನಮಗೆ ಮನದಟ್ಟು ಮಾಡುತ್ತಿರುತ್ತದೆ. ರತ್ನಾಕರನ ಭರತ, ಭರತನ ಕುಟುಂಬದ ಆದರ್ಶೀಕರಣದ ಭರಾಟೆ ಕೆಲವೊಮ್ಮೆ ಬೇಸರ ತರಿಸುವುದುಂಟು. ಕುಟುಂಬದ ಸ್ತ್ರೀ ಪಾತ್ರಗಳೆಲ್ಲವೂ ಭರತನನ್ನು ಎಲ್ಲ ವಿಷಯಗಳಲ್ಲಿಯೂ ಒಂದರ್ಥದಲ್ಲಿ ಅಸ್ತಿತ್ವರಾಹಿತ್ಯದಿಂದ ಅನುಕರಿಸಿದರೆ ಅದೇ ಕುಟುಂಬದ ಪುರುಷ ಪಾತ್ರಗಳು ಅಸ್ತಿತ್ವದ ಪ್ರಶ್ನೆ ಬಂದಾಗ ಬಹುತೇಕ ಸಿಡಿದು ನಿಲ್ಲುತ್ತವೆ.

ಇನ್ನೊಂದು ಅಂಶವೆಂದರೆ ಇಲ್ಲಿಯ ಸ್ತ್ರೀ ಪಾತ್ರಗಳು ಪರಂಪಾರಗತ ಪತಿಭಕ್ತಿಯನ್ನೇ ಮೆರೆಯುತ್ತಾ ಮಾನವ ಸಹಜ ರಾಗದ್ವೇಷ ಮತ್ಸರಗಳಿಂದ ದೂರವುಳಿದವುಗಳಾಗಿ ವ್ಯಕ್ತಿತ್ವದ ದೃಷ್ಟಿಯಿಂದ ತೀರಾ ಸರಳವಾಗುತ್ತವೆ. ಕ್ರಿಯಾತ್ಮಕ ಸ್ಥಿತ್ಯಂತರಗಳಿಗೆ ಒಳಗಾಗುವುದೇ ಇಲ್ಲ. ರತ್ನಾಕರನ ರಸಿಕತೆ, ಕಲಾತ್ಮಕತೆಗಳ ಪ್ರಾತಿನಿಧ್ಯವನ್ನು ವಹಿಸುವ ಉಪಕರಣಗಳಂತೆ ನಡೆದುಕೊಳ್ಳುತ್ತವೆ. ರಸಿಕತೆಯಿಂದ ಕೂಡಿದ ಭರತ–ಪತ್ನಿಯರ ಸರಸ ಸಲ್ಲಾಪ ಸಂಭಾಷಣೆಗಳೂ ಸಹಜತೆಯಿಂದ ವಂಚಿತವಾಗಿ ಔಪಚಾರಿಕವೆನಿಸಿ ನಾಟಕೀಯತೆಯನ್ನು ಪಡೆದುಕೊಳ್ಳುತ್ತವೆ. ತಲೆಯಲ್ಲಿ ನೆರೆತ ಕೂದಲು ಭರತನ ವೈರಾಗ್ಯಕ್ಕೆ ಕಾರಣವಾಗುವಂಥದ್ದು ಜೈನರ ಕಾಲಲಬ್ಧಿಯ ಪರಿಭಾಷೆಯನ್ನು ನುಡಿದಾಗ್ಯೂ ಸಾಂಕೇತಿಕವಾಗಿ ಇದು ಭರತನ ಶೃಂಗಾರ–ವೈರಾಗ್ಯಕ್ಕೆ ದ್ಯೋತಕ ಪ್ರತಿಮೆಯ ರೂಪವನ್ನು ತಾಳಿ, ಹೆಚ್ಚು ಅರ್ಥಪೂರ್ಣವಾಗುತ್ತದೆ.

ಬಾಹುಬಲಿಯೊಂದಿಗಿನ ಯುದ್ಧ ಸಂದರ್ಭವನ್ನು ಭರತ ಹೆಚ್ಚು ಆಯಾಸಗೊಳ್ಳದೆ ದಾಟಿಕೊಂಡರೂ ತೊಂಬತ್ತೊಂಬತ್ತು ಜನ ತಮ್ಮಂದಿರ ದೀಕ್ಷೆ, ಯಶಸ್ವತೀದೇವಿಯ ದೀಕ್ಷೆ, ಚಕ್ರೇಶ್ವರನ ಆಪ್ತನಾದ ಮೇಘೇಶನ ದೀಕ್ಷೆ, ಈ ಸುದ್ದಿ ಕೇಳಿ ತನ್ನ ನೂರು ಜನ ಮಕ್ಕಳು ಕೌಮಾರ್ಯದಲ್ಲಿಯೇ ತಮ್ಮ ತಾತನ ಎದುರಿಗೆ ನಿಂತು ತಲೆಕೂದಲನ್ನು ಕಿತ್ತುಕೊಂಡು ಎಲ್ಲವನ್ನು ತ್ಯಜಿಸಿ ಬತ್ತಲೆ ಧರ್ಮವನ್ನು ಸ್ವೀಕರಿಸಿ ನೆಲದ ಒಡೆತನವನ್ನು ತೃಣೀಕರಿಸಿದ್ದು, ಆದಿ ತೀರ್ಥಂಕರನ ನಿರ್ವಾಣ.... ಯುದ್ಧಕ್ಕಿಂತಲೂ ತಣ್ಣನೆಯ ಭೀಭತ್ಸವನ್ನು ಸೃಷ್ಟಿಸಿದ ಈ ಯಾವ ಘಟನೆಗಳನ್ನೂ ತಡೆಯಲು ಭರತನಿಂದ ಸಾಧ್ಯವಾಗುದಿಲ್ಲ. ಯಾವ ಯುದ್ಧಗಳೂ ಇಲ್ಲದೆ ಷಟ್ಖಂಡಗಳ ಒಡೆಯನಾದ ಭರತ, ಬಾಹುಬಲಿ ಯುದ್ಧ ಮಾಡದಂತೆ ತಡೆಯಬಲ್ಲನಾದನೇ ಹೊರತು ಬಾಹುಬಲಿ ದೀಕ್ಷೆ ವಹಿಸದಂತೆ ನೋಡಿಕೊಳ್ಳುವುದರಲ್ಲಿ ವಿಫಲನಾಗುತ್ತಾನೆ. ಈ ಎಲ್ಲ ವೈರಾಗ್ಯದ ಆವರಣವೂ ಭರತನನ್ನು ಹಣ್ಣು ಮಾಡುತ್ತದೆ. ಈ ಮಾನಸಿಕ ವೃದ್ಧಾಪ್ಯವನ್ನು ಸಂಕೇತಿಸುತ್ತಾ ಹುಟ್ಟಿಕೊಂಡ ನೆರೆತಕೂದಲು ತನ್ನ ಭೋಗದ ಕ್ಷಣಿಕತೆಗೆ ಕನ್ನಡಿ ಹಿಡಿಯುತ್ತದೆ. ಆ ಕ್ಷಣದಲ್ಲಿಯೇ ಆತ್ಮ ವಿಮರ್ಶೆಗೆ ಒಳಗಾಗುವ ಭರತ ಅಂದೇ ಮನೆ ತೊರೆಯುತ್ತಾನೆ. ದಿಗಂಬರನಾಗುತ್ತಾನೆ, ಕ್ಷಣಾರ್ಧದಲ್ಲಿ ಮುಕ್ತಿಯನ್ನು ಪಡೆಯುತ್ತಾನೆ, ಸಿದ್ಧನಾಗುತ್ತಾನೆ. ಭರತನ ನಂತರವೂ ಭರತೇಶನ ಗಂಡು ಮಕ್ಕಳಲ್ಲಿ ಮರೀಚಿ ಒಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಮುಕ್ತಿಯನ್ನು ಪಡೆಯದೆ ಹೆಣ್ಣು ಮಕ್ಕಳೆಲ್ಲ ಸ್ವರ್ಗವನ್ನು ಸೇರುವರು. ಭರತನ ಒಟ್ಟಾರೆ ಬದುಕಿನ ಯಶಸ್ಸು, ಭೋಗದ ಆಕಾಂಕ್ಷೆ, ದಿಗ್ವಿಜಯ, ಅಂತಿಮದಲ್ಲಿ ಬದುಕಿನ ಪರ್ಯಾವಸಾನಗಳು.....ಈ ಎಲ್ಲವೂ ಅನೇಕ ತೊಡರುಗಳೊಂದಿಗೆ ನಮ್ಮ ಮುಂದೆ 'ಸಾರ್ಥಕತೆ'ಯ ನೆಲೆಯಲ್ಲಿ ಪ್ರಶ್ನಾರ್ಥಕ ಚಿಹ್ನೆಗಳಾಗಿಯೇ ಉಳಿಯುತ್ತವೆ. ಇಂತಹ ಭೀಕರ ಪರ್ಯಾವಸಾನಗಳಿಗೆ ಧಾರ್ಮಿಕ ತಾತ್ತ್ವಿಕ ಒತ್ತಾಯಗಳೇ ಕಾರಣವೆನಿಸಿ ರತ್ನಾಕರನ ಪರ ವಕಾಲತ್ತು ವಹಿಸುವಂತೆ ಮಾಡುತ್ತವೆ. ತನ್ನ ಧರ್ಮದ ವಿರುದ್ಧವೇ ಬಂಡೆದ್ದವನು ರತ್ನಾಕರ. ನಯಸೇನ, ಬ್ರಹ್ಮಶಿವ, ವೃತ್ತವಿಲಾಸರಂತೆ ಆತನಿಗೆ ಇತರ ಧರ್ಮಗಳೊಂದಿಗಿನ ತಕರಾರುಗಳು ಇಲ್ಲವೆಂದರೂ ನಡೆದೀತು. ರತ್ನಾಕರನಿಗೆ ಇತರ ಧರ್ಮಗಳ ಕೊರತೆಗಳು ಅಸಡ್ಡೆಯಾಗಿ ಕಾಣುವುದಕ್ಕಿಂತಲೂ ಹೆಚ್ಚಾಗಿ ತನ್ನ ಧರ್ಮದ ಸ್ವೀಕಾರ ಕಾರಣವಾಗಿ ಬಹುಶಃ ಇತರ ಧರ್ಮಗಳೊಂದಿಗೆ ರತ್ನಾಕರನಿಗಿರಬೇಕಾದ ತಾತ್ಸಾರಗಳು ಇಲ್ಲಿ ಇಲ್ಲವಾಗಿವೆ. ಜೊತೆಗೆ ತನ್ನ ಧರ್ಮದಲ್ಲಿಯ ಕೊರತೆಗಳೇ ಮುಖ್ಯವೆನಿಸುವಂತೆ ಕಾಣುತ್ತವೆ. ಅದರಲ್ಲಿಯೂ ಆತನ ತೀವ್ರ ಆಕ್ಷೇಪಗಳೆಲ್ಲವೂ ಧಾರ್ಮಿಕ ನಿರ್ದೇಶಕರಾಗಿ, ಧಾರ್ಮಿಕ ನಿರಂಕುಶಮತಿಗಳಾದ ಜೈನಾಚಾರ್ಯರ ವಿರುದ್ಧ, ಅವರ ಪರಂಪರಾಗತ ಅರ್ಥಹೀನ ಮೌಢ್ಯ ಸಿದ್ಧಾಂತಗಳ ವಿರುದ್ಧ. ತನ್ನ ಧರ್ಮದಲ್ಲಿಯ ಅತಾರ್ಕಿಕ ಸಿದ್ಧಾಂತಗಳನ್ನು ತೀವ್ರವಾಗಿಯೇ ವಿರೋಧಿಸುವ ರತ್ನಾಕರ ತನ್ನ ಟೀಕಾಸ್ತ್ರಗಳಿಗೆ ಗುರಿ ಮಾಡುವುದು ಮುಖ್ಯವಾಗಿ ಮುನಿಗಳ ಸಾಂಪ್ರದಾಯಿಕ ಜಡತೆಗಳನ್ನು. ಇದಕ್ಕೆ ಆತನ ಜೀವಿತದ ಅನುಭವಗಳನ್ನು, ಮಠದೊಂದಿಗಿನ ತಕರಾರು ಕಾರಣವಾಗಿರಬಹುದು.

> ಅವರೊಂದು ತಿಂಗಳೋದಿದ ಶಾಸ್ತ್ರ ನನಗೊಂದು।
> ದಿವಸದೊಳವಗತಿಯಹುದು॥
> ತವೆ ಬಾಹ್ಯ ರಚನೆಯೊಳೇನೆಂದು ಬಿಟ್ಟನು। ಭವಿಸುತಿಹೆನು ಹಂಸನೊಳಗೆ। (ಪ.101)
> ಹರವರ ನುಡಿಯಿಲ್ಲದಾನಿರುತಿದೆನುಂ। ಡುರುಳಿ ಭಟ್ಟಾರಕರಂತೆ॥
> ನೆರಪಿ ಹೊತ್ತಗೆಗಳ ಹೊರಗಟ್ಟಿ ಭವಸೇನ। ಗುರುಗಳಂತವರಾಡುತಿಹರು। (ಪ.102)

> ಮೈಯ್ಯೊಳಿರ್ದಾತ್ಮನ ಬತ್ತಲೆ ಮಾಡಿ। ನೊಯ್ಯ ನೀಕ್ಷಿಸಿದರೆ ತಾವು॥ ಮೈಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ। ಹುಯ್ಯಲಿಡುತ ಸುತ್ತುತಿಹರು॥ (ಪ.103)[೨iii]

'ಮೈಯ್ಯ ದಂಡಿಸಿದನೆ ಭಿಕ್ಷೆಗೆಂದು ಓರ್ವರ್ಗ್ಗೆ ಕೈಯೊಡ್ಡಿದನೆ?', 'ಅರುವೆಯ ಬಿಸುಟರೆ ತಪಸಿಯೆ?', 'ಹರೆ ಬಿಟ್ಟಪರರೆಗೋಲೆ ವಿಷಹೋಯ್ತೆ ಫಣಿಗೆ? ಎನ್ನುವಂತಹ ಮಾತುಗಳೆಲ್ಲವೂ ಪರಿಪೂರ್ಣ ಜೈನ್ಯತ್ವವನ್ನು ಅರಗಿಸಿಕೊಳ್ಳಲಾರದೆ ಬಾಹ್ಯ ನೆಲೆಯಲ್ಲಿ ಚಿಹ್ನೆಗಳನ್ನು ಅವಧರಿಸಿದ ಯೋಗಿಗಳನ್ನು ಕುರಿತದ್ದು. "ಪೊಡವಿವೆಂಗಳ ಬಿಟ್ಟು ಸಗ್ಗವೆಂಗಳಿಗೊಲ್ದ ಜಡ ಬ್ರಹ್ಮಚಾರಿಯಲ್ಲ...." ಎಂಬ ಕೊಂಕು ಸಹ ಜೈನ ಮುನಿಗಳನ್ನು ಕುರಿತದ್ದೆ.

ಜೈನ ಆಗಮ ತತ್ವಶಾಸ್ತ್ರಗಳನ್ನು ಬಲ್ಲಿದನಾದ, ಆಳವಾಗಿ ಅಧ್ಯಯನಗೈದ ರತ್ನಾಕರನಿಗೆ ಹಿಂದಿನ ಮಾರ್ಗ ಮಾದರಿಯನ್ನು ಅನುಸರಿಸುವುದೇನೂ ಕಷ್ಟವಾಗಿರಲಿಲ್ಲ. ಆದರೆ ಧಾರ್ಮಿಕ, ಸಾಂಸ್ಕೃತಿಕ ಪಲ್ಲಟಗಳಿಗೆ ಆದ್ಯತೆ ನೀಡುವ ರತ್ನಾಕರ ತನ್ನ ಕಾವ್ಯಕ್ಕೆ ಅದರ ಅನಿವಾರ್ಯತೆಯನ್ನು ಅರಿಯುತ್ತಾನೆ. ಹಾಗಾಗಿ ವಸ್ತುಕವನ್ನು ಬಿಟ್ಟು ವರ್ಣಕಕ್ಕೂ ಓದುಗಬ್ಬದಿಂದ ದೂರ ಸರಿದು ಹಾಡುಗಬ್ಬಕ್ಕೂ ಮಣೆ ಹಾಕುತ್ತಾನೆ. ಹಾಡುಗಬ್ಬದಲ್ಲಿ ಕಾವ್ಯ ರಚಿಸುವಾಗಲೂ ರತ್ನಾಕರನಿಗೆ ತನ್ನ ಓದುಗರು ಯಾರೆಂಬುದರ ಬಗ್ಗೆಯೂ ಸ್ಪಷ್ಟ ಕಲ್ಪನೆಯಿದೆ. ಒಂಬತ್ತು ತಿಂಗಳಲ್ಲಿ 80 ಸಂಧಿಗಳ 9699 ಪದ್ಯಗಳ ಈ ಮಹಾಕಾವ್ಯವನ್ನು ಮುಗಿಸುದುದಾಗಿ ಹೇಳಿಕೊಳ್ಳುವ ರತ್ನಾಕರ ತನ್ನ ಕಾವ್ಯ ಕಾರಣಗಳನ್ನು ಝುಂಕದೆ ವ್ಯಕ್ತಪಡಿಸುತ್ತಾನೆ.

ಕಥಾನಿರೂಪಣೆಯಲ್ಲಿ ರತ್ನಾಕರನದು ವಿಶಿಷ್ಟ ಕಲೆಗಾರಿಕೆ. ಜೈನಮತೀಯ ಆವರಣದಲ್ಲಿಯೇ ಜೈನ ಸಾಂಪ್ರದಾಯಿಕ ಪೌರಾಣಿಕ ವಸ್ತುವಿಗೆ, ಪಾತ್ರಗಳಿಗೆ ಜೀವ ತುಂಬುವಾಗ ದೇಸಿ ನೆಲೆಯ ಅಚ್ಚುಗಳನ್ನೇ ಅದಕ್ಕೆ ಬಳಸುವುದು ವಿಶಿಷ್ಟ. ಹಾಗಾಗಿ ಸಾಂಸ್ಕೃತಿಕ ಪಲ್ಲಟಗಳನ್ನು, ಸಂಘರ್ಷಗಳನ್ನು ಗುರುತಿಸುವ ನೆಲೆಯಲ್ಲಿಯೂ ಭರತೇಶ ವೈಭವ ಬಹುಮುಖ್ಯವಾಗುತ್ತದೆ. ಒಂದೆಡೆ ದೇಸಿಯ ಚಿಂತನೆಗಳು ರತ್ನಾಕರನನ್ನು ಕಥಾ ಚೌಕಟ್ಟನ್ನು ನಿರ್ಮಿಸಿಕೊಳ್ಳಲು ಸಾಂಗತ್ಯ ಮಾದರಿಗೆ ಒಗ್ಗುವಂತೆ ಒತ್ತಾಯಿಸಿದರೆ ಮತ್ತೊಂದು ನೆಲೆಯಲ್ಲಿ ಮಧ್ಯಕಾಲೀನದಲ್ಲಿ ತಲೆ ಎತ್ತಿದ ಧಾರ್ಮಿಕ ಬಿಕ್ಕಟ್ಟುಗಳು ಈವರೆಗಿನ ಜೈನ ಪಾರಂಪರಿಕ ತಾತ್ತ್ವಿಕ ವಿಚಾರಧಾರೆಯನ್ನು ಬದಲಿಸಿಕೊಳ್ಳುವಂತೆ ಮಾಡುತ್ತವೆ, ಸಮುದಾಯದ ಪರವಾಗಿ ನಿಂತು ರತ್ನಾಕರನನ್ನು ಪ್ರಶ್ನಿಸುವಂತೆ ಮಾಡುತ್ತವೆ.

ಭರತನ ಅಪ್ಪಟ ಸಾಂಸಾರಿಕ ಆವರಣದಲ್ಲಿಯೂ ಜೈನ ಯೋಗ–ಆಧ್ಯಾತ್ಮದ ಪರಿಭಾಷಾ ಕೋಶವನ್ನೇ ಸಿದ್ಧಪಡಿಸಬಹುದಾದಷ್ಟು ಜೈನ ಆಧ್ಯಾತ್ಮಿಕ ಯೋಗ ವಿಚಾರಗಳು ಭರತೇಶ ವೈಭವದಲ್ಲಿ ಇಡುಕಿರಿದಿವೆ. ಅಲ್ಲದೆ ಈ ತತ್ತ್ವಗಳೆಲ್ಲವೂ ಕವಿಯ ಆಶಯದಂತೆ ಸರಳಗೊಂಡಿವೆ. ಯೋಗ, ತ್ಯಾಗ, ಆಧ್ಯಾತ್ಮ, ಕಠಿಣ ತತ್ತ್ವಗಳನ್ನೇ ತನ್ನ ಸಮುದಾಯಕ್ಕೆ ಹೇರುತ್ತಾ ಬಂದ ಜೈನಧರ್ಮದ ನಿಲುವುಗಳಿಗೆ ಹೊಸ ನಿರ್ವಚನಗಳನ್ನು ನೀಡುವ ರತ್ನಾಕರ ಆ ಮೂಲಕ ಸಾಮಾನ್ಯ ಆಧ್ಯಾತ್ಮಿಕ ಜೀವಿಯ ಆಧ್ಯಾತ್ಮಿಕ ಬದುಕನ್ನೂ ಸಹ್ಯವಾಗಿಸುತ್ತಾನೆ. ಹಾಗಾಗಿಯೇ ರತ್ನಾಕರವರ್ಣಿ ಒಬ್ಬ ಶ್ರೇಷ್ಠ ಕವಿ ಅದಕ್ಕಿಂತಲೂ ಅವನೊಬ್ಬ ಮಹಾನ್ ದಾರ್ಶನಿಕ.

**ಆಧಾರ ಗ್ರಂಥಗಳು**


1. ಭರತೇಶ ವೈಭವ, ಸಂ:ಪ್ರೊ.ಜಿ.ಬ್ರಹ್ಮಪ್ಪ, ಡಾ.ಹಂಪ ನಾಗರಾಜಯ್ಯ, ಡಾ.ಸಿ.ಆರ್.ಕಮಲಮ್ಮ ಹಂಪನಾ, ಕಸಪಾ, ಬೆಂಗಳೂರು, 2003.

2. ಕವಿ–ಕಾವ್ಯ–ಪರಂಪರೆ–ರತ್ನಾಕರವರ್ಣಿ, ಸಂ:ಡಾ.ವಿ.ಸೀತಾರಾಮಯ್ಯ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, 1984.
3. ಭರತೇಶ ವೈಭವ ಸಂಗ್ರಹ, ಸಂ:ಡಾ.ಕೆ.ಶಾರದಾ & ಡಾ.ಎಸ್.ಶಿವಾನಂದ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, 2007.
4. ರತ್ನಾಕರವರ್ಣಿ–ಕವಿ ಕಾವ್ಯ ವಿಚಾರ, ವಿವಿಧ ಲೇಖಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.
5. ಪಂಪಭಾರತಂ, ಗದ್ಯಾನುವಾದ:ಎನ್.ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2005.
6. ದಿವ್ಯಧ್ವನಿ ಕನ್ನಡದಲ್ಲಿ, ಡಾ.ಎಂ.ಎ.ಜಯಚಂದ್ರ, ಧಾತ್ರಿ ಪುಸ್ತಕ, ಬೆಂಗಳೂರು, 2008.
7. ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಪರಿಕಲ್ಪನೆ–ಉಗಮ ಮತ್ತು ವಿಕಾಸ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಸಂಶೋಧಕರು:ಶ್ರೀಮತಿ ಎಂ.ರೇಣುಕಾ)

**ಕೊನೆಟಿಪ್ಪಣಿಗಳು**

---

[i]. ಚರಿತ ಪುರಾಣದೊಳೊಂದನೆ
ಬರೆದರೆ ಬರೆದಿಕ್ಕಿದರ್ ತ್ರಿಶಷ್ಠಿ ಶಲಾಕಾ
ಪುರುಷರ ಪುರಾಣಮಂ ಕವಿ
ಪರಮೇಶ್ವರರಂತು ಜನಕೆ ನೋಂತರುಮೊಳರೇ॥
ಚಾವುಂಡರಾಯ ಪುರಾಣಂ, ಆದಿಪುರಾಣಂ, ಪದ್ಯ–8, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–158

[ii]. ಟಿ.ಕೆ.ತುಕೋಲ : ಶ್ರವಣ ಬೆಳಗೊಳ–ಗೊಮ್ಮಟೇಶ್ವರ, ಶ್ರವಣ ಬೆಳಗೊಳ ಒಂದು ಸಮೀಕ್ಷೆ, ಸಂ:ಜಿ.ಎಸ್.ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 2004, ಪು.146

[iii]. ಈ ವಿವರಗಳನ್ನು ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಪರಿಕಲ್ಪನೆ : ಉಗಮ ಮತ್ತು ವಿಕಾಸ ಎಂಬ ಅಪ್ರಕಟಿತ ಸಂಶೋಧನಾ ಮಹಾಪ್ರಬಂಧದಿಂದ ಪಡೆದು ಕೊಳ್ಳಲಾಗಿದೆ.
ಸಂಶೋಧಕರು:ಶ್ರೀಮತಿ ಎಂ. ರೇಣುಕಾ, ಪುಟ.254

[iv]. ಚಿಕ್ಕ ಬೆಟ್ಟದ ಮೇಲಿರುವ ಭರತನ ಮೂರ್ತಿ ಶಿಲ್ಪದ ಕುರಿತು ಮಾಹಿತಿಯನ್ನು ಕೊಟ್ಟವರು ಪ್ರೊ. ಶುಭಚಂದ್ರ ಅವರು. ಇವರಿಗೆ ಧನ್ಯವಾದಗಳು.

[ತ]. ಜಾನಪದ ಗೀತೆಗಳಲ್ಲಿ ಬಾಹುಬಲಿ, ಸಂ:ಶ್ರೀಮತಿ ಜಿ.ಎಸ್.ವಸಂತಮಾಲಾ, ಪ್ರಕಾಶಕರು:ಚಂದ್ರಗಿರಿ–ಚಿಕ್ಕಬೆಟ್ಟ ಮಹೋತ್ಸವ ಸಮಿತಿ, ಶ್ರವಣಬೆಳಗೊಳ, 2005, ಪು.21–22

[ತು]. ಭರತೇಶ ವೈಭವ ಸಂಗ್ರಹ, ಪು.11

[ತುು]. ಪೂರ್ವಪುರಾಣ, ಸಂ:ಎ.ಶಾಂತಿರಾಜ ಶಾಸ್ತ್ರೀ, ಪು.47–356

[ತುುು]. ಭರತೇಶ ವೈಭವ, ಸಂ:ಪ್ರೊ.ಜಿ.ಬ್ರಹ್ಮಪ್ಪ, ಡಾ.ಹಂಪ ನಾಗರಾಜಯ್ಯ, ಡಾ.ಸಿ.ಆರ್.ಕಮಲಮ್ಮ ಹಂಪನಾ, ಕಸಪಾ, ಬೆಂಗಳೂರು, 2003